

ಸಂಪುಟ ೭ | ಏಪ್ರೆಲ್ ೧೯೪೮ | ಸಂಚಿಕೆ ೧

ಹೊಸ ವರ್ಷ

ಈ ಯುಗಾದಿಯಂದು ಕೊರವಂಜಿಯು ತನ್ನ ಆರನೆಯ ಹುಟ್ಟು ಹಬ್ಬವನ್ನು ಆಚರಿಸಬೇಕಾಗಿತ್ತು. ದೇಶದ ಜತೆಗೆ ತಾನೂ ಹೊಸ ಉಡುಪು ಧರಿಸಿ, ದಯಾಮಯನನ್ನು ಪ್ರಾರ್ಥಿಸಿ ಬೇವು ಬೆಲ್ಲ ತಿಂದು ಹಬ್ಬವನ್ನಾಚರಿಸಿ, ಬಾಯಿ ಸಿಹಿ ಮಾಡಿಕೊಂಡು, ತನ್ನವರೊಂದಿಗೆ ದಿನವನ್ನೆಲ್ಲಾ ನಗಿಸಿ ನಗುತ್ತಾ ಕಳೆಯಬೇಕು.

ಆದರೆ ಈ ಸಾರಿ ಜನವರಿ ಮೂವತ್ತನೆಯ ದಿನವೇ ದೇಶಕ್ಕೆ ದೇಶವೇ ಬೇವು ತಿಂದಿತು. ಆ ಬೇವು ತಿಂದಾಗ ಬೆಲ್ಲದ ಸೂಚನೆಯೇ ಇರಲಿಲ್ಲ. ತಂದೆಯು ನಿಧನರಾದ ವರುಷ ಹಬ್ಬವುಂಟೇ ? ಈ ಹುಟ್ಟು ಹಬ್ಬವನ್ನು ಕೊರವಂಜಿಯು ಪ್ರಾರ್ಥನೆಯಲ್ಲಿ ಕಳೆಯುತ್ತಾಳೆ.

ಬೇವು ತಿಂದ ಬಾಯಿಗೆ ಬೆಲ್ಲ ಬೀಳಬೇಕಾದರೆ, ನೊಂದ ಮನಸ್ಸಿಗೆ ಸಂತಸ ದೊರೆಯಬೇಕಾದರೆ ಆ ಮಹಾತ್ಮನೇ ನಮಗೆ ದಾರಿ ತೋರಬೇಕು.

ಆತನ ಆಶೀರ್ವಾದದಿಂದಲೇ ನಾವು ಆತನ ಹಾದಿಯಲ್ಲಿ ಮುಂದುವರೆದು ಸಂತಸಕಾಣಬೇಕು ಹಾಗೂ ಆತನ ಆತ್ಮಕ್ಕೆ ಸಂತಸಗಾಣಿಸಬೇಕು.

ಅಂದಮೇಲೆ ಈ ಯುಗಾದಿಯಂದು ಕೊರವಂಜಿಯು ನಮ್ರತೆಯಿಂದ, ಶಿಳಿ ಹೃದಯದಿಂದ, ಮಹಾಮಹಿಮನಲ್ಲಿ ಪ್ರಾರ್ಥಿಸುತ್ತಾಳೆ:

" ಭಾರತೀಯರೆಲ್ಲರೂ ಜಾತಿಭೇದವಿಲ್ಲದೆ, ವರ್ಣಭೇದವಿಲ್ಲದೆ, ಸೋದರರಂತೆ ಸುಖಶಾಂತಿಯಿಂದ ಬಾಳುವಂತೆ ಆಗಲಿ.

ದಿಳ್ಳಿಯವರು ಹಳ್ಳಿಯವರನ್ನು ಸುಲಿಗೆ ಮಾಡಿ ಜೀವನ ನಡೆಸುವುದು ತಪ್ಪಲಿ – ಹಣವಂತನು ಕಾರ್ಮಿಕನನ್ನು ಸುಲಿಗೆ ಮಾಡುವುದು ತಪ್ಪಲಿ. ವಿದ್ಯಾವಂತನು ವಿದ್ಯಾರಹಿತನನ್ನು ದೋಚುವುದು ತಪ್ಪಲಿ.

ಸೋದರ ಸೋದರಿಯರೆಲ್ಲರೂ ಶಾಂತಿಯಿಂದ ಸುಖದಿಂದ ಜೀವನ ನಡೆಸಲಿ. ಹಾಗೂ " ಸರ್ವೇ ಜನಾಃ ಸುಖಿನೋಭವಂತು "

* * *

ಇನ್ನು ಸ್ವವಿಷಯ. ಹಲವಾರು ವರ್ಷಗಳಿಂದಲೂ ಕೊರವಂಜಿಯು ತನ್ನ ಕೈಲಾದಮಟ್ಟಿಗೆ ಕನ್ನಡಿಗರನ್ನು ನಗಿಸಿ ಮೆಚ್ಚುಗೆಗೆ ಪಾತ್ರಳಾಗಿದ್ದಾಳೆ. ಯುದ್ಧ ಕಾಲದಲ್ಲಿ ಕೂಡ, ಕಾಗದದ ಬೆಲೆ ಏರಿದಾಗಲೂ, ಅಚ್ಚುಕೂಟದ ಖರ್ಚು ಏರಿದಾಗಲೂ ಸಕಲ ವಸ್ತುಗಳೂ ಪ್ರಿಯವಾದಾಗಲೂ, ಕೇವಲ ಎರಡೇ ಆಣೆಗೆ ಸಂತುಷ್ಟಳಾಗಿ ತನ್ನ ಜೀವನವನ್ನು ನಡೆಸಿದಳು, ತನ್ನ ಸೇವೆಯನ್ನು ಸಲ್ಲಿಸಿದಳು.

ಯುದ್ಧಾನಂತರ, ಕಾಲವು ಇನ್ನೂ ವಿಷಮಿಸುತ್ತ ಬಂದಿದೆ. ಮೊದಲಿದ್ದ ಸಮರಕಾಲವೇ ವಾಸಿ, ಉಬ್ಬಿಸಿದರೆ ಕೆಲಸ ಸಾಗುತ್ತಿತ್ತು ಎನ್ನುವಹಾಗಾಗಿದೆ. ಅಂದಿಗಿಂತ ಇಂದು ಕಷ್ಟನಿಷ್ಠೂರಗಳು ವ್ಯವಹಾರ ಪ್ರಸಂಗಗಳು ಹೆಚ್ಚಾಗಿವೆ. ಆದರೂ ಕೊರವಂಜಿಯನ್ನು ಉತ್ತಮಗೊಳಿಸಿ, ವಾರಪತ್ರಿಕೆಯನ್ನಾಗಲೀ, ಕಡೆಗೆ ಪಕ್ಷ ಪತ್ರಿಕೆಯನ್ನಾಗಲಿ ಮಾಡೋಣವೆಂಬ ಹಂಬಲ ಹೆಚ್ಚಿದೆ ಹಾಗೆ ಮಾಡಬೇಕಾದರೆ ಕೇವಲ ಎರಡಾಣೆಯನ್ನು ನಾಲ್ಕಾಣೆಯನ್ನಾದರೂ ಮಾಡಬೇಕಾಗುತ್ತದೆ. ನಮ್ಮ ಓದುಗರು, ಹಿತಚಿಂತಕರು ಪತ್ರವನ್ನು ದಯೆಮಾಡಿ ಬರೆದು— ಮಾಸಪತ್ರಿಕೆಯಾಗಿ ೨ ಆಣೆಯದೇ ಇರಲಿ–ಇಲ್ಲಾ ವಾರಪತ್ರಿಕೆಯಾಗಿ, ೪ ಆಣೆಯದೇ ಆಗಲೀ ಅಥವಾ ಮಾಸಪತ್ರಿಕೆಯಾಗಿಯೇ ಇನ್ನೂ ಹಿರಿದಾಗಿ ೪ ಆಣೆಯದೇ ಆಗಲಿ—ಎಂದು ಸೂಚಿಸಿದರೆ, ಬಹುಮತವಿದ್ದಂತೆ ನಾವು ಮಾಡಲು ಸಿದ್ಧ.

—ಸಂ.

—— o ——

ಕುಹಕಿಡಿಗಳು

ಗಾಳಿ ಬಂದ ಸಮಯದಲ್ಲಿ ರೈತರೆಲ್ಲ ಹರತಾಳ ಹೂಡಿದರಂತೆ

* * *

ಬೆಕ್ಕು ಅಡ್ಡಲಾಯಿತು ಅಂತ ಪಕ್ಕಕ್ಕೆ ತಿರುಗಿದರೆ—
—ಜೀಪು ಬಂದು ಗುಮ್ಮೋಣವೇ ?

* * *

ಬಾಪೂಜಿ ಸಂಚಿಕೆಯಲ್ಲಿ ಚರಮಗೀತೆಗಳನ್ನೇಕೆ ಪ್ರಕಟಿಸಲಿಲ್ಲ ? ....ಪ್ರಶ್ನೆ
—ಬಂದವುಗಳನ್ನು ಓದಿದಾಗ ನಗು ಬಂದುದರಿಂದ

* * *

ಹೈದ್ರಾಬಾದಿನಲ್ಲಿ ಪೆಟ್ರೋಲ್ ಸಿಕ್ಕಿದೆಯಂತೆ—
—ಅಂದರೆ ಯಾವಾಗ ಬೆಂಕಿ ಬೀಳುತ್ತೋ ಅಲ್ಲಿ !

* * *

ಪೂರ್ವ ಬಂಗಾಳೀಗಳಿಗೆಲ್ಲಾ ಉರ್ದುವೇ ದೇಶಭಾಷೆ ಆಗಬೇಕೆಂದು ಜನಾಬ್ ಜಿನ್ನಾರವರು ಇಂಗ್ಲೀಷಿನಲ್ಲಿ ಹೇಳಿದರಂತೆ.

* * *

ಹಸಿರು ಬಣ್ಣ ಕಣ್ಣಿಗೆ ತಂಪಂತೆ—
—ಇರಬೇಕು ! ಅದಕ್ಕೇ ಹಸಿರನೋಟು ನೋಡಿದರೆ ಹಿತವಾಗುವುದು.

* * *

ಪಾಕೀಸ್ಥಾನದಿಂದ ಬಂದ ಅಕ್ಕಿಯಲ್ಲಿ— ಬರೀ ಬಿರಿಯಾನಿ ಮಾಡಬೇಕು ಎಂದು ಷರತ್ತು ಏನೂ ಮಾಡಿಲ್ಲವಂತೆ,

* * * *

ಪ್ಯಾಲೆಸ್ಟೈನ್ ಸಮಸ್ಯೆಯನ್ನು ನಿಷ್ಪಕ್ಷಪಾತವಾಗಿ ವ್ಯವಹರಿಸಲು ಜನಾಬ್ ಜಿನ್ನಾರವರನ್ನು ನೇಮಿಸುತ್ತಾರೆಂಬುದು ಶುದ್ಧ ಸುಳ್ಳಂತೆ—

* * * *

ಪೂರ್ವ ಬಂಗಾಳಾದಲ್ಲಿ ಸಾಕಷ್ಟು ಮಳೆಯಾಗದಿರುವುದಕ್ಕೆ— ಭಾರತದ ಕಾಂಗ್ರೇಸ್ ಸಂಸ್ಥೆಯೇ ಕಾರಣವೆಂದು ಅಲ್ಲಿನ ಹಿರಿಯ ಅಧಿಕಾರಿಗಳು ಕಂಡು ಹಿಡಿದಿರುವರಂತೆ.

* * * *

ಲಂಡನ್ನಿನಲ್ಲಿ ರೇಡಿಯೋ ಮೂಲಕ ಟ್ಯಾಕ್ಸಿ ನಡೆಸುತ್ತಾರಂತೆ—

—ಏನು ಮಹಾ! ನಮ್ಮೂರಿನಲ್ಲಿ ಗಾಡಿಯುವನಿಲ್ಲದೆ—ಜಟಕಾ ಓಡುವುದಿಲ್ಲವೇ ?

* * * *

ಹೈದ್ರಾಬಾದಿನಲ್ಲಿ ಖಾಸಿಂ ರಜ್ವಿಯವರು ಒಂದು ಸಂಶೋಧನೆ ನಡೆಸಿ— ಶೇಕಡ ೨॥ ಯ ಬ್ರಾಹ್ಮಣರೇ ಜವಾಬ್ದಾರೀ ಸರ್ಕಾರ ಕೇಳುತ್ತಿರುವುದು ಇನ್ನಾರಿಗೂ ಬೇಡ ಎಂದು ಕಂಡು ಹಿಡಿದಿದ್ದಾರೆ—

—ಒಂದೊಂದು ಸಂಸ್ಥಾನದ ಚರಿತ್ರೆಯಲ್ಲೂ ಒಂದೇ ವಿಷಯ ಮರಳಿ ಮರಳಿ ಬರುತ್ತೆ ಅಲ್ಲವೇ !

* * * *

ಜೀವದಾನ ಮಾಡುವ ವೈದ್ಯರುಗಳಿಗೆ ಕೂಡ ಸರ್ಕಾರದವರು 'ಜೀವದಾನ' ಮಾಡುವುದಿಲ್ಲವಂತೆ.

* * * *

ಸಚಿವರು 'ಮೂರನೇ ತರಗತಿಯಲ್ಲಿ' ಪ್ರಯಾಣಮಾಡಿದರು. (ಪತ್ರಿಕೆ)

—ಏನು ಮಹಾ! ದಿನಾಗಲೂ ಅದೇ ನಾವು ಮಾಡೋದು— ಆದರೆ ಮೀಸಲು ಗಾಡಿಯಲ್ಲಲ್ಲ ಅಷ್ಟೆ !

* * *

ಉರಿಗಾಳು

ಕಿಸಾನರೂ ಮಜ್ದೂರರೂ ಅಖಂಡವಾಗಿ ಮುಷ್ಕರ ಹೂಡಬೇಕೆಂದೂ, ಹೊಟ್ಟೆಗೂ ಬಟ್ಟೆಗೂ ದೊರೆಯುವತನಕ ಯಾರೂ ವ್ಯವಸಾಯ ಕೈಗಾರಿಕೆಗಳನ್ನು ಮಾಡಕೂಡದೆಂದೂ, ಹಲವು ಬುದ್ಧಿವಂತ ನಾಯಕರು ಚಳುವಳಿ ಹೂಡುವರಂತೆ.

* * * *

ಕಾಫಿ ಬೆಲೆ ವಿಪರೀತವಾಗಿ ಏರಿರುವುದರಿಂದ ತಮಗೆ ಸರ್ಕಾರ ಕೊಡುತ್ತಿರುವ ಸ್ಕಾಲರ್ಷಿಪ್‌ಗಳನ್ನು ಹೆಚ್ಚಿಸಬೇಕೆಂದು ವಿದ್ಯಾರ್ಥಿಗಳು ಮನವಿ ಮಾಡಿಕೊಂಡಿರುವರಂತೆ.

* * *

ಮುಂದಿನ ಚುನಾವಣೆ ಕಾಲದಲ್ಲಿ ಸರ್ವರಿಗೂ ಓಟಿನ ಅಧಿಕಾರ ದೊರೆಯುವುದರಿಂದ, ಅಷ್ಟರೊಳಗೆ ಅನಕ್ಷರಸ್ಥ ವಯಸ್ಕರೆಲ್ಲರಿಗೂ X ಎಂಬ ಗುರುತನ್ನು ಹಾಕುವುದಷ್ಟಾದರೂ ಅಕ್ಷರ ಕಲಿಸಬೇಕೆಂದು ನಿರ್ಧರಿಸುವರಂತೆ.

* * * *

ಸರ್ಕಾರವೇ ಬಸ್ಸುಗಳನ್ನು ಊರಿಂದೂರಿಗೆ ಇಷ್ಟರಲ್ಲೇ ನಡೆಯಿಸುತ್ತಾರೆ (ಸುದ್ದಿ)....ಇದನ್ನು ಕೇಳಿದ ಅನೇಕ ಅಧಿಕಾರಿಗಳು ತಮ್ಮ ಪ್ರಯಾಣವನ್ನು ಮುಂದುವರಿಸಿರುವರಂತೆ.

* * * *

" ಹೆಣ್ಣುಮಕ್ಕಳನ್ನು ಹಣಕ್ಕೆ ಮಾರಿದ ದುರಾತ್ಮರೊಂದಿಗೆ ನಾವು ಯಾವ ಸಂಪರ್ಕವನ್ನೂ ಇಟ್ಟುಕೊಳ್ಳುವುದಿಲ್ಲ " (ಷೇಕ್ ಅಬ್ದುಲ್ಲಾ)....ವರದಕ್ಷಿಣೆಗಾಗಿ ಬಾಯಿ ಬಿಡುವವರಿಗೂ ಇದು ತಕ್ಕ ಎಚ್ಚರಿಕೆ.

* * * *


ಸರ್ಕಾರಿ ಕಚೇರಿಗಳಲ್ಲೆಲ್ಲ, ಇನ್ನುಮುಂದೆ, ಜವಾನರಿಗೆಲ್ಲ ಖದ್ದರ್ ಬಟ್ಟೆಯನ್ನೇ ಉಡುಪಿಗಾಗಿ ಕೊಡಲಾಗುವುದು (ಪತ್ರಿಕೆ).... ಅಂದಮೇಲೆ, ಸಾಹೇಬರೂ ಕೂಡ ಅದೇ ಬಟ್ಟೆಯನ್ನು ಹೇಗೆ ಧರಿಸಿಯಾರು ?

* * *

ಸೆಕ್ರಟರಿ ಕಾರ್ಡೆಲ್ ಹಲ್‌ರವರು ತಮ್ಮ ಅಧಿಕಾರಾವಧಿಯಲ್ಲಿ ನಡೆದ ಅಂತರಂಗದ ಘಟನೆಗಳನ್ನು ಪುಸ್ತಕರೂಪವಾಗಿ ಬರೆದು ಹಣ ಸಂಪಾದಿಸುತ್ತಿದ್ದಾರೆ........ ಆತನನ್ನನುಸರಿಸಿ ನಮ್ಮ ದೇಶದ ಸೆಕ್ರಟರಿಗಳೂ ಪುಸ್ತಕ ಬರೆಯಲು ಹೊರಟರೆ, ಪ್ರಕಟಣೆಗೆ ಮೊದಲೇ ಭಾರಿ ಗಂಟು ಸಿದ್ಧ.

* * *

—o—



ಸಿಂಹಾಸನದ ಸಿಂಹಗಳೇ— ಮುನಿದು ಬಿದ್ದರೆ ?

ಸುಂದರ್ರಾಯನ ಸಂಸಾರ !


ಸುಂದರ್ರಾಯನ ' ಇಹ ಸಂಸಾರ !
ಹೇಳಲು ಹೊರಟರೆ ಬಲು ವಿಸ್ತಾರ !—
ರಾಯನಿಗಿರುವುದು ಒಂದೇ ಕಣ್ಣು ,
ರಾಯರ ಹೆಂಡತಿ ಹಳ್ಳಿಯ ಹೆಣ್ಣು,—
ಆಡಿದ್ಮಾಡಿದ್ ತಪ್ ಹಿಡಿಯೋಕೆ,—
ಕಾಣದ್ಕೇಳಿದ್ ನಂಬಿ ಕೊರಗೋಕೆ,—
ಗೊಣ ಗೊಣ ಗುಟ್ಟುವಳೀ ' ಮನೆಯಾಕೆ ' !
ಅರಚೀ ಕಿರಚೀ ಪರಚಾಡೋಕೆ,
ಒಡೆದೂ ಬಡಿದೂ ಹರಿದಾಡೋಕೆ,
ಐವರು ಬಾಲರು ,— ವಾನರರೇಕೆ ? !
ಹಾಡುವ ನೆವದಲಿ ರೋದನ ಮಾಡುವ
ಕೋಡಗದಂದದ ಕುವರಿಯರ್ಕೈವರು !
ತಡೆಬಡೆಯಿಲ್ಲದೆ ಗುಡುಗುವ ಅಜ್ಜಿ ,
ಕಿಡಿ ಕಿಡಿ ಕಾರುವ ಗೂರಲು ಅಜ್ಜಿ ;
ಕೆಮ್ಮುತ ನರಳುವ ಮುದಿನಾಗತ್ತೆ ,
ಬಾವನ ಮಾವನ ವಾರಗಿತ್ತಿ ,
ಮಡದಿಯ ಸೋದರ ಮಾವನ ಮೈದುನ,
ಮನೆಯಲಿ ಮಾಡುವ ಬಲು ಪುಂಡುತನ ;
ದಿಕ್ಕೇ ಇಲ್ಲದ ದಾರೀ ತಪ್ಪಿದ
ದೂರದ ನೆಂಟನ ಅಕ್ಕನ ಗಂಡ,
ನಡೆಯುತ ಲೆಡವೋ ಗಡಿಬಿಡಿ ಗುಂಡ,—
ಅನ್ನಕೆ ಬಿದ್ದಿಹ ಧಾಂಡಿಗ, ಭಂಡ !

ಅಡಿಗೇ ಮನೆಗೊಂದಡಗೂಲಜ್ಜಿ ;
ಉಗ್ರಾಣಕ್ಕೊಂದುಂಡಾಡ್ಭಟ್ಟ ! ;
ಕೊಟ್ಟಿಗೆ ತುಂಬಾ ಕರೆಯದ ಆಕಳು ,
ಕೆಲಸವ ಕೆಡಿಸಲು ನಾಲ್ಕೈದಾಳು ,
ಬೆಳ್ಳಂಬೆಳಗೂ ಬೆಕ್ಕಿನಕಾಟ,
ಬಿಡದೇ ಬೊಗಳುವ ನಾಯಿಯವಾಂತ್ರ ,—

ರಾಯನಿಗೇತಕೆ ಹಿಡಿಯಿತು ಹುಚ್ಚು ! ?
ಸಂಸಾರವ ನಡೆಸಲು ಅರಿಯದ ಪೆಚ್ಚು !
ಎನ್ನುತ ನಗುವರು ನೆರೆಹೊರೆ ಜನಗಳು,
ರಾಯನ ಕಷ್ಟವ ತಿಳಿಯದ ದನಗಳು !
ಪಾಪ ! ಸುಂದರ್‍ರಾಯನ ಸಂಸಾರ,
ಹೇಳಲು ಹೊರಟರೆ ‘ ಅಪಾ ೯ ೯ ೯ ರ ’ !

....ಬುಳ್ಳ.

—o—



ಕೋಣನ ಮುಂದೆ ಕಿನ್ನರಿ ?

ನವರು

ಕಾಗದದ ಮೇಲಿನ ಹತೋಟಿ, ಅಚ್ಚುಕೂಟಗಳಲ್ಲಿ ಅವಾಂತರ ಮೊಳೆಗಳ ಕ್ರಯ ಶಾಯಿಯ ಅಭಾವ ಇತ್ಯಾದಿ ತೊಂದರೆ ತಾಪತ್ರಯಗಳ ನಡುವೆ ಪತ್ರಿಕೆಗಳನ್ನು ನಡೆಸುತ್ತಿರುವ ಕನ್ನಡಿಗರು ಧೀರರೇ ಸರಿ. ಆದರೆ, ಹಲಕೆಲವು ಸಲಹೆಗಳಿಗೆ ಪತ್ರಿಕಾಕರ್ತರು ಕಿವಿಯಾಡಿಸಿದರೆ. ಅವರ ಕಷ್ಟನಷ್ಟಗಳು ಕೊಂಚ ಮಟ್ಟಿಗಾದರೂ ಪರಿಹಾರವಾಗಬಹುದೆಂಬ ನಂಬಿಕೆಯಿಂದ, ಈ ಲೇಖನವನ್ನು ಬರೆಯುತ್ತಿದೇನೆ. ಉದಾಹರಣೆಗೆ, ನಾನು ಬರೆದಿರುವ ಈ ಮೇಲಿನ ಒಂದು ವಾಕ್ಯವೇ ಸಾಕು. ಅದನ್ನು ಅಷ್ಟು ಲಂಬಿಸಿ, ಅನವಶ್ಯಕವಾದ ಮಾತು ಸೇರಿಸಿ, ಹೆಚ್ಚು ಕಾಗದ ಶಾಯಿಗಳನ್ನು ವ್ಯಯಮಾಡಬೇಕಾದ ಚಟ ಏಕೆ. "ಕಾಗದದ ಹತೋಟಿ, ಅಚ್ಚು ಅವಾಂತರ, ಮೊಳೆ ಕ್ರಯ ಶಾಯಿ ಅಭಾವಗಳ ನಡುವೆ ಪತ್ರಿಕೆ ನಡೆಸುತ್ತಿರುವ ಕನ್ನಡಿಗರು ಧೀರರೇ!" ಎಂದು ನಾನು ಬರೆವರೆ ಸಾಕಾಗಿತ್ತು. ಹಾಗೆ ಬರೆದಿದ್ದರೆ, ಒಟ್ಟು ೨೬ ಅಕ್ಷರಗಳು ಉಳಿತಾಯವಾಗಿ. ಸರ್ವವಿಧದಲ್ಲೂ ಲಾಭ ಬರುತ್ತಿತ್ತು ಹಾಗೆಯೇ, ಮಂತ್ರಿಗಳ ಪ್ರಚಾರ ಭಾಷಣಗಳನ್ನು ವರದಿ ಮಾಡುತ್ತ, ದಿನದಿನಕ್ಕೂ ಒಂದೇ ವಿಷಯವನ್ನೋ ಒಂದೇ ತೆರನ ವಿಚಾರಸರಣಿಯನ್ನೋ ಶ್ರಮವಹಿಸಿ ಮೊಳೆ ಒತ್ತಿ ಅಚ್ಚುಹಾಕುವುದಕ್ಕಿಂತ, "ಮಂತ್ರಿಗಳು ಯಥಾಪ್ರಕಾರ ಒಂದು ಗಂಟೆ ತಡವಾಗಿ ಬಂದು ಎರಡು ಗಂಟೆ ಕಾಲ ಭಾಷಣ ಮಾಡಿದರು" ಎಂದು ಹೇಳಿದರೆ, ಸಾಕು. ಯಥಾಪ್ರಕಾರ, ಎಂಬ ಮಾತಿನಿಂದ ವಾಚಕಮಹಾಶಯರು ಆ ಭಾಷಣವನ್ನೂ ಹಿಡಿಬಲ್ಲರು. ....ನವರು ಒಂದು ಕಮ್ಯೂನಿಸ್ಟ್ ಭಾಷಣವನ್ನೂ ಕೊಟ್ಟರು; .. ರು ತಮ್ಮ ಕಾಂಗ್ರೆಸ್ ಭಾಷಣವನ್ನು ದಯಪಾಲಿಸಿದರು , ... ತಮ್ಮ ಪ್ರಗತಿ ಸಾಹಿತ್ಯ ಭಾಷಣವನ್ನು ಮತ್ತೆ ಹೇಳಿದರು ; ....ನವರು ತಮ್ಮ ಗೋಳನ್ನು ಮತ್ತೆ ಹೇಳಿಕೊಂಡರು; .... ರು ತಮ್ಮ ಕೋಮುವಾರನ್ನು ಘೋಷಿಸಿದರು ಎಂದು ವರದಿ ಮಾಡಿದರೆ, ಸಾಕು! ವಾಚಕರು ಸಂಪಾದಕರಿಗೆ ಅನಂತವಂದನೆಗಳನ್ನು ಸಮರ್ಪಿಸುತ್ತಾರೆ. ಕಾಗದವೂ ಉಳಿಯುತ್ತದೆ; ಕಂಪಾಜಿಟರುಗಳು ಕೆಲವರು ಚಕ್ಕರ್‌ಕೊಟ್ಟರೂ, ಉಳಿದವರಿಂದಲೇ ಕೆಲಸ ನಡೆಸಿಬಿಡಬಹುದು.

"........ನವರು" ಎಂಬ ಮೊಳೆ ಜೋಡಣೆ ಕೂಡ ಯಾಕೆ? ಅದನ್ನಾದರೂ ಪತ್ರಿಕಾಕರ್ತರು ಏಕೆ ತೆಗೆದುಹಾಕಬಾರದು? ಹೀಗೆ ನವರುವುದನ್ನು ನಾವು "ತಲೆಗೆಲ್ಲ ಒಂದೇ ಮಂತ್ರ" ಎಂದು ಅನುಸರಿಸುವಹಾಗಿಲ್ಲ. "ಅದು ಹೇಗೆ?

ಕೃಷ್ಣಪ್ಪ, ನವರಾದರೆ. ಸರೋಜಮ್ಮ, ಕೂಡ ನವರೇನೆ! '' ಎಂದೇನೋ ಸುಲಭ ದಲ್ಲಿ ಹೇಳಿ ಬಿಡಬಹುದು ನೀವು ಆದರೆ, ನನಗೆ ಯಾಕೋ ಸರೋಜಮ್ಮನವರು ಸರಿ ತೋರುವದಿಲ್ಲ. ಕೃಷ್ಣಪ್ಪನ್ ÷ ಅವರು = ಕೃಷ್ಣಪ್ಪನವರು. ಒಪ್ಪಿದೆ. ಆದರೆ, ಸರೋಜಮ್ಮನ್ ಎಂಬುದು ಗ್ರಾಮರೇ? ಸರೋಜಮ್ಮಳ್ ಎಂದಿರಬೇಡವೆ? ಸರೋಜಮ್ಮಳವರು ಎಂದರೆ, ಆಕೆ ಒಪ್ಪುತ್ತಾರೆಯೆ? ಮಹಿಳಾಲೋಕ ಒಪ್ಪುತ್ತದೆಯೆ? ಯೋಚಿಸಿ. ಈ ಎರಡು ಇತ್ಯಾದಿಗಳಿಗೂ "ನವರು" ಸರಿ ಹೋಗುವುದು ಎಂದು ಸಮ್ಮತಿಸಿದರೂ ಕೂಡ, ಕೃಷ್ಣಸ್ವಾಮಿಗೆ 'ಯವರು' ಬೇಕಾಗುತ್ತದೆ; ದೇವದಾಸ್‌ಗೆ 'ರವರು' ಸೇರಿಸಬೇಕಾಗುತ್ತದೆ. ಮತ್ತೆ ಕೆಲವರಿಗೆ ಬರೀ ರು! ಉದಾ: ಫೆರ್ನಾಂಡೆಸ್ ಎಂಬುವರ ಪಾಡು ತೆಗಿದುಕೊಳ್ಳೋಣ. ಅವರನ್ನು ಪತ್ರಿಕಾಕರ್ತರೂ ಲೇಖಕರೂ ಫೆರ್ನಾಂಡೆಂಸ್ರು ಎಂದು ಬಿಡುತ್ತಾರೆ, ಅದರಿಂದ ಅವರಿಗಾಗುವ ವ್ಯಥೆಯೆಷ್ಟೆಂಬುದನ್ನ ಕೊಂಚವೂ ಲೆಕ್ಕಿಸಧೆ! ರಾಮನ್‌ರ ಕೃಷ್ಣನ್‌ರು, ಚ್ಯಂಗ್ ಕೈ ಷೇಕ್ರು, ಜಯರಾಂರು.... ಅವಲಕ್ಷಣ ಆಚಾರ್ ಎಂಬ ಮಹಾನುಭಾವ ಮೊಳೆ ಜೋಡಿಸುವವರ ಕೈಗೆ ಸಿಕ್ಕಿ ಆಚಾರ್ರು ಅಂತ ಅಚ್ಚು ಕಟ್ಟಾಗಿ ಹೊರಟಿರುತ್ತಾರೆ. ಅಯ್ಯಂಗಾರು ಎಂಬುದು ಆಗಲೇ ಅಯ್ಯನ್ ÷ ಗಾರು ಎಂಬ ಎರಡು ಬಹುಮಾನ ಸೂಚಕ ಪದಗಳ ಜೋಡಣೆ, ಅದಕ್ಕೆ ಮತ್ತೆ ಇನ್ನೊಂದು 'ರು' ಸೇರಿಸಿ ಗಾರು + ರು ಗಾರ್ರು ಎಂಬ ವ್ಯಸನಪರಂಪರೆಗೆ ಸಿಕ್ಕಿಕೊಳ್ಳುವುದು ಯಾವ ನ್ಯಾಯ? ಮತ್ತೆ ಕೆಲವರಿಗೆ ಗಳು ವೇ ಗತಿ: 'ಚಿನ್ನ ಸಾಮಿಗಳು' ಧೋಂಡೂಸಾಗಳು' "ಕೇಸರಿಗಳು" "ಶಿಖಾಮಣಿಗಳು"!....

ಇಂಥ ತೊಡಕುಗಳಿಂದ ನಾವು ಕೂಡಲೇ ಪಾರಾಗಬೇಕು. ಬೆವಿನ್ರೂ ಚರ್ಚಿಲ್ರೂ ಬಂದಿದ್ದರು ಎಂದು ಹೇಳುವ ಬದಲು ಇನ್ನುಮುಂದೆ, "ಬೆವಿನ್ ಚರ್ಚಿಲ್ ಬಂದಿದ್ದರು'' ಎಂದು ಅಚ್ಚು ಹಾಕೋಣ. "ಶ್ರೀಮತಿ ಸರೋಜಮ್ಮ ಹಾಡಿದರು; ವಿಧಿಯಿಲ್ಲದೆ, ಅಣ್ಣಯ್ಯ ಸ್ವಾಮಪ್ಪ ಕೇಳುತ್ತ ಕುಳಿತಿದ್ದರು" ಅನ್ನೋಣ ಅನ್ಯಾಯವಾಗಿ ಕಾಗದ ತಿಂಬ, ಶಾಯಿ ಹೀರುವ, ಮೊಳೆ ಮಾಸುವ ಈ ನವರು ಸಂಗತಿ ಇನ್ನು ಬೇಡ

ಇಂಥ ಅಮೂಲ್ಯ ಸಲಹೆಗಳನ್ನು ಇನ್ನು ನೂರಾರು..... ಏಕೆ? ಸಂಪಾದಕರೆ! ಸಾಕೇನು? ಮುಂದೆ ಯಾವಾಗಲಾದರೂ ಅವಕಾಶ ಕೊಡುತ್ತೇನೆ, ಅಂತೀರಾ? ಆಗಲಿ....ನಮ್ಮಪ್ಪ, ದೇವರು!

—ಶೇಷ್ಯೆ.

ಬಡ್ಡಿ

ಮದ್ರಾಸ್ ಷಹರಿನಲ್ಲಿ ಮಾರ್ಚಿ ೧೦ನೆ ತಾ|| ಜರುಗಿದ ಮುಸ್ಲಿಂ ಲೀಗ್ ವಿಶೇಷಾಧಿವೇಶನದಲ್ಲಿ, ಲೀಗ್ ಪ್ರತಿನಿಧಿಗಳು ಇನ್ನುಮುಂದೆ ಅಸೆಂಬ್ಲಿ ಕೌನ್ಸಿಲುಗಳಿಗೆ ಚುನಾಯಿತರಾಗಿ ಬಂದರೆ, ತಮ್ಮ ೩೦ ಕಾರ್ಯಕ್ರಮಗಳನ್ನು ನೆರವೇರಿಸಲು ಪ್ರಯತ್ನಿಸುವರೆಂದೂ ಅದೇ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುವ ಇತರೇ ಮೆಂಬರುಗಳೊಡನೆಯೂ, ಸಂಸ್ಥೆಗಳೊಂದಿಗೂ, ಲೀಗ್ ಹೆಸರನ್ನುಳಿಸಿಯೋ ಅಳಿಸಿಯೋ ಸಹಕರಿಸುವರೆಂದೂ, ಠರಾವು ಮಾಡಿದರಷ್ಟೆ. ಮುಸ್ಲಿಂ ಲೀಗ್‌ನವರು ಸ್ಥಾಪಿಸಿಕೊಂಡಿರುವ ಹೊಸ ರಾಷ್ಟ್ರದಲ್ಲಿ ಅವರು ಯಾವ ಯಾವ ಸುಧಾರಣೆಗಳನ್ನು ತರುವರೆಂಬುದಕ್ಕೆ ಈ ೩೦ ಯೋಜನೆಗಳು ನಮಗೆ ನಿದರ್ಶನಗಳಾಗಿವೆ.

ಅವುಗಳಲ್ಲಿ ನನ್ನ ಮನಸ್ಸಿಗೆ ತೀರ ಹರ್ಷವನ್ನುಂಟುಮಾಡಿರುವುದೆಂದರೆ, ಬಡ್ಡಿಯನ್ನು ಸರ್ವತಃ ಸಂಪೂರ್ಣವಾಗಿ ಸರ್ವವಿಧದಲ್ಲೂ ನಿಷೇಧಿಸಿರುವ ನಾಲ್ಕನೆಯ ಕಾರ್ಯಕ್ರಮ ! ಇಸ್ಲಾಂ ಧರ್ಮದ ಪ್ರಕಾರವೇ ತಮ್ಮ ಹೊಸ ರಾಷ್ಟ್ರವನ್ನು ನಡೆಯಿಸುವೆವು ಎಂದು ಘೋಷಿಸುವ ಲೀಗಿನವರ ಉದಾರ ಹೃದಯಕ್ಕೆ ಇದೊಂದು ಕುರುಹಾಗಿ ಕಂಗೊಳಿಸುತ್ತದೆ. ಬಡ್ಡಿ ತೆಗಿದುಕೊಳ್ಳುವುದನ್ನೂ ಕೊಡುವುದನ್ನೂ ಲೀಗಿನವರು ಸುಗ್ರೀವಾಜ್ಞೆಯಿಂದ ತೆಗೆದುಹಾಕುತ್ತಾರೆ, ಖಂಡಿತ. ಅಂದರೆ, ಪಠಾಣರ ಮುಖ್ಯ ಕಸಬಿಗೆ ಪಾಕಿಸ್ಥಾನದಲ್ಲಿ ಅವಕಾಶವಿಲ್ಲದಂತಾಗಿ. ಅವರು ಹಿಂದುಸ್ಥಾನದಲ್ಲೇ ನೆಲೆಸಿ, ಇತರ ಪಕ್ಷದವರನ್ನೇ ಶರಣುಹೋಗಬೇಕಾಗುತ್ತದೆ. ಮುಲ್ತಾನಿಗಳಿಗೂ ಅಲ್ಲಿ ಪೆಂಗನಾಮವೇ ! ಕರೆಂಟ್ ಡಿಪಾಸಿಟ್ ಫಿಕ್ಸೆಡ್ ಡಿಪಾಸಿಟ್ ಷೇರ್ ಮಾರ್ಕೆಟ್ ಇತ್ಯಾದಿಗಳು ಅಲ್ಲಿ ಹುಟ್ಟಿಕೊಳ್ಳುವಂತಿಲ್ಲ—ಎಂಥ ತಾಪತ್ರಯದಲ್ಲಿ ನರಳಿದರೂ, ಅಲ್ಲಿ ಭಿಕ್ಷೆ ಚಂದಾ ದರೋಡೆ ಇತ್ಯಾದಿಗಳಿಂದಲೇ ಹಣದ ಅಭಾವವನ್ನು ನಿಭಾಯಿಸಿಕೊಳ್ಳಬೇಕಾಗುತ್ತದೆ. ಬ್ಯಾಂಕುಗಳಲ್ಲಿ ಜನ ಕೊಂಡಷ್ಟೇ ಕೊಡುತ್ತಾರೆ, ಬಡ್ಡಿ ಸೇರಿಸಿ ಕೊಡುವಂತಿಲ್ಲ, ಕೊಳ್ಳುವಂತಿಲ್ಲ. “ ಸಾಲ ” ಎಂಬ ಮಾತೇ ನಾಸ್ತಿಯಾಗಿ ಎಲ್ಲರೂ ಲೋಲರಾಗಿ ನಲಿದಾಡುತ್ತಾರೆ. ಸರ್ಕಾರ ಕೂಡ ಧರ್ಮವಿರೋಧವಾದ ಬಡ್ಡಿ ಆಸೆ ತೋರಿಸಿ ಪ್ರಜೆಗಳಿಂದ ಅವರು ಮಿಗಿಸಿರಿಸಿದ ಹಣವನ್ನು ಪಡೆಯುವಹಾಗಿಲ್ಲ. ಅಹನ್ಯಹನಿ ಕಾಲಕ್ಷೇಪವೇ ಬಡ್ಜೆಟ್‌ನ ನೀತಿ, ಋಣಂ ಕೃತ್ವಾ ಘೃತಂ ಪಿಬೇತ್, ಎಂಬ ಚಾರ್ವಾಕ ಪದ್ಧತಿ ಕೇವಲ ಅಲ್ಲಿಲ್ಲದ ಹಿಂದುಗಳದೇ.

ಆಧುನಿಕ ನಾಗರಿಕತೆ, ಆಧುನಿಕ ಕೈಗಾರಿಕಾಭಿವೃದ್ಧಿ ಎಲ್ಲವೂ ಬಡ್ಡಿಯ ಆಧಾರದ ಮೇಲೆ ಬೆಳೆದಿದೆ; ಡಿವಿಡೆಂಡ್ ಎಂಬುದು ಬಡ್ಡಿಯ ರೂಪಾಂತರ; ಬಡ್ಡಿಯ ದರದಿಂದ ಒಂದು ದೇಶದ ಸಂಪತ್ತನ್ನು ಅಳೆಯಬಹುದು; ಮುಂತಾದ ತತ್ವಗಳನ್ನು ಮುಸ್ಲಿಂ ಲೀಗ್ ರಾಷ್ಟ್ರದ ಅರ್ಥಶಾಸ್ತ್ರ ವಿಶಾರದರು ಒಪ್ಪಿಕೊಂಡು ಅದನ್ನು ಪ್ರಚಾರ ಮಾಡುವಹಾಗಿಲ್ಲ. ಅಲ್ಲಿಗೆ ಹೊರದೇಶಗಳಿಂದ ಆಮದಾಗುವ ಪತ್ರಿಕೆಗಳಿಂದಲೂ ಪುಸ್ತಕಗಳಿಂದಲೂ. ಬಡ್ಡಿ ಆಸೆಯನ್ನು ಕೆರಳಿಸುವ, ಬಡ್ಡಿಯ ಇರುವಿಕೆಯನ್ನೂ ತಿಳಿಸುವ ಭಾಗಗಳನ್ನು ಕತ್ತರಿಸಿ ಹಾಕಲಾಗುವುದು. ಸರಳ ಬಡ್ಡಿ ಕೊರಳಬಡ್ಡಿ ಚಕ್ರಬಡ್ಡಿ ವಕ್ರಬಡ್ಡಿ ಲೆಕ್ಕಗಳೆಲ್ಲ ವಜಾ: ಸರ್ಕಾರ ಕೂಡ, ಕೈಗಾರಿಕಾಭಿವೃದ್ಧಿಗಾಗಿಯೂ ವ್ಯವಸಾಯದ ಬೆಳವಣಿಗೆಗಾಗಿಯೂ ಲೀಗಿನವರಿಗೆ ಉಚಿತವಾಗಿ ಹಣ ಕೊಟ್ಟು, ಕೊಟ್ಟಷ್ಟೇ ಹಣವನ್ನು ವಾಪಸ್ ಪಡೆಯುತ್ತದೆ.

ಬಡ್ಡಿ, ಬಡ್ಡಿ, ಎಂಬ ಅಸಹ್ಯಪದವನ್ನು ಕೇಳಿ ಕೇಳಿ ಕಿವಿ ತೂತಾಗಿರುವ ಕನ್ನಡಿಗರಿಗಂತೂ, ಪಾಕಿಸ್ತಾನದವರಮೇಲೆ ಅಳಿಸಲಾರದ ಅಸೂಯೆ ಎಂದೆಂದಿಗೂ ಇದ್ದೇ ಇರುತ್ತದೆ.

—— o ——

ಮದ್ರಾಸಿನ ನ್ಯಾಯವಿಧಾಯಕ ಸಭೆಯಲ್ಲಿ, ಅಧ್ಯಕ್ಷರ ತೀರ್ಪಿನಂತೆ, ಸಭಿಕರು ನಿದ್ದೆ ಮಾಡಬಾರದು, ನಶ್ಯಹಾಕಬಾರದು, ತಾಂಬೂಲ ತಿನ್ನಕೂಡದು, ಪೇಪರೋದಕೂಡದು, ಪುಸ್ತಕ ಓದಬಾರದು, ಮಾತಾಡಬಾರದು, ಸಿಗರೇಟು ಸೇದಬಾರದು ...(ಪತ್ರಿಕೆ) ಮುಂದಿನ ಚುನಾವಣೆಗೆ ಉಮೇದುವಾರರು ಸಿಗುವುದೇ ತಾಪತ್ರಯದ ಕೆಲಸವಾಗುತ್ತದಲ್ಲಾ !

* * *

ದಿವಾನ್ ಚಮನ್‌ಲಾಲರು ಹಿಂದಿ ಭಾಷೆಯಲ್ಲಿ ಕೇಳಿದ ಒಂದು ಪ್ರಶ್ನೆಗೆ ಮಂತ್ರಿ ಜಾನ್ ಮತ್ತಾಯಿ ಅವರು ಮಲಯಾಳದಲ್ಲಿ ಉತ್ತರವಿತ್ತರು.......ನಮ್ಮವರೊಬ್ಬರು ಹಿಂದೆ ಅದೇ ಸಭೆಯಲ್ಲಿ ಕನ್ನಡದಲ್ಲಿ ಮಾತನಾಡಿದಾಗ, ಈ ಬುದ್ಧಿ ಎಲ್ಲಿಗೆ ಹೋಗಿತ್ತು ? ಸುಮ್ಮನೆ ನಕ್ಕು ಅವರಿಗೆ ಅಪಮಾನ ಮಾಡಿದರಲ್ಲಾ !

ಒಳಮನದ ತಳಮಳ

(ಪ್ರಶ್ನೆಗೆ ಉತ್ತರ)

೧. ಸಂಗೀತಕ್ಕೂ ನನಗೂ ಬದ್ಧದ್ವೇಷ; ಯಾರಾದರೂ ಹಾಡುವುದನ್ನು ಕೇಳುತ್ತಲೂ, ಹೋಗಿ ಅವರ ಕೆನ್ನೆಗೆ ಎರಡು ಏಟು ಕೊಡಬೇಕೆಂದಿರುತ್ತೆ. ಇದಕ್ಕೆ ಪರಿಹಾರವೇನು ?

ನಿಮ್ಮಂತೆಯೇ ನಮ್ಮ ದೇಶದಲ್ಲಿ ಅನೇಕರಿರುವರು, ಎಂಬುದನ್ನು ತಿಳಿಯ ಬೇಕಾದದ್ದು ಮೊದಲನೆಯದು. ಇದರಿಂದ ನಿಮಗೆ ಸಮಾಧಾನವೂ ಧೈರ್ಯವೂ ಬರುತ್ತದೆ. ಅಲ್ಲದೆ, ಅನೇಕರು ಹಾಡುವುದನ್ನು, ದೇಶ ಹಿತದ ದೃಷ್ಟಿಯಿಂದ, ನೀವು ಯೋಚಿಸುವಂತೆ, ಬಲಪ್ರಯೋಗದಿಂದಲಾದರೂ ನಿಲ್ಲಿಸಬೇಕಾಗುತ್ತದೆ. ಎಂದು ನಮಗೂ ತೋರುತ್ತದೆ ಆದರೆ.......ನಿಮಗೆ ಸಂಗೀತದ ಮೇಲೆ ಇಷ್ಟು ಅಸಹ್ಯ ಉಂಟಾಗಲು, ಎಳೆ ವಯಸ್ಸಿನಲ್ಲಿ ನಿಮ್ಮ ತಾಯಿ ಹಾಡಿದ ಜೋಗುಳ ಅಥವಾ ನಿಮ್ಮ ಅಕ್ಕನ ಹಾಡಿನ ಮೇಷ್ಟರ ಕಿರಲೋ, ಅಥವಾ, ಕೈಹಿಡಿದಾಕೆಯ ಕಂಠಶೋಷಣವೋ, ಯಾವುದಿರಬಹುದೆಂದು ವಿವೇಚಿಸಿ, ಅರಿತರೆ ಕ್ಷೇಮ....... ಮತ್ತೊಂದು ವಿಷಯ! ನೀವೇ ಏಕೆ ಏಕಾಂತದಲ್ಲಿ ಕೊಂಚ ಕೊಂಚ, ಗಟ್ಟಿಯಾಗಿ ಹಾಡಿಕೊಳ್ಳಬಾರದು? ಆಗ, ಸ್ವಕಪೋಲಕಲ್ಪಿತವಾದ, ನಿಮ್ಮ ಪ್ರಹಾರದಿಂದಲೇ ನಿಮ್ಮ ಬುದ್ಧಿ ಸರಿಹೋದರೂ, ಹೋದೀತು.

೨. ನನ್ನ ಸೋದರ ಮಾವನ ಮನೆ ತುಮಕೂರಲ್ಲಿದೆ; ಅಲ್ಲಿಗೆ ಹೋಗಲು ನಾನು ಬೆಂಗಳೂರು ರೈಲು ಸ್ಟೇಷನಿಗೆ ಹೋದಾಗಲೆಲ್ಲ, ನನಗೆ ರೈಲು ತಪ್ಪಿದೆ. ಇದನ್ನು ಸಂಪೂರ್ಣ ರೈಲಿನವರದೇ ತಪ್ಪು ಎನ್ನಬಹುದೆ? ಅಥವಾ, ನನ್ನ ತಪ್ಪೆ? ತಪ್ಪು ನನ್ನದಾದರೆ, ತಿದ್ದುವ ಬಗೆ ಹೇಗೆ?

ಬೆಂಗಳೂರು ಸ್ಟೇಷನ್, ಎಂದು ನೀವು ಹೇಳಿರುವುದರಿಂದಲೂ, ಸಾಮಾನ್ಯ ವಾಗಿ, ಕ್ಲುಪ್ತ ಕಾಲಕ್ಕೆ ಮೊದಲೇ ರೈಲು ಹೊರಡುವುದಿಲ್ಲವಾದ್ದರಿಂದಲೂ, ತಪ್ಪು ನಿಮ್ಮದೇ, ನಿಮ್ಮ ಅಂತರಂಗದ್ದೇ. ನಿಮಗೂ ನಿಮ್ಮ ಸೋದರ ಮಾವನಿಗೂ ಎಂದಾದರೂ ಮಾತುಕತೆ ಆಗಿತ್ತೆ? ಅಲ್ಲಿಗೆ ಹೋದರೆ, ಆ ಮನೆಯ ಯಜಮಾ ನಿಯ ಮುಖದಲ್ಲಿ ಕೋಪ ತಾತ್ಸಾರ ಬೇಸರ ಭಯ ಇತ್ಯಾದಿಗಳ ಕುರುಹುಗಳು ಎದ್ದು ನಿಲ್ಲುತ್ತವೆಯೇನು? ಆ ತೆರನ ಭೀತಿಯಿಂದಲೇ ನೀವು ಸ್ಟೇಷನಿಗೆ ತಡ ವಾಗಿ ಬರುತ್ತಿರುವುದು....ಅಥವಾ,....?.... ಸೋದರಮಾವನ ಮಗಳನ್ನು ನಿಮಗೆ

ಕೊಡುವುದು ಎಂಬ ಸಂಕಲ್ಪ ಭರವಸೆ ಆಸೆ, ಇದ್ದು, ಈಚೆಗೆ ಆಕೆಗೆ ಬೇರೆ ಕಡೆ ಮದುವೆಯಾಯಿತೆ ?.... ಯೋಚಿಸಿ ! ಹಾಗಿದ್ದಪಕ್ಷದಲ್ಲಿ, ನೀವು ತುಮಕೂರು ಯಾತ್ರೆಯ ಯೋಚನೆಯನ್ನು ಬಿಟ್ಟುಬಿಡುವುದೇ ವಾಸಿ.

೩ ನಾನು ಗಾಂಧಿ ಟೋಪಿಯವ. ಆದರೂ, ಜಾತಿದ್ವೇಷ ಎಂಬ ವಿಷ ವಾಯು ನನಗೆ ಅಮೃತಸಮಾನವಾಗಿದೆ........ನನಗೇನಾದರೂ ಬುದ್ಧಿವಾದ ಹೇಳಿ ನನ್ನನ್ನು ತಿದ್ದಿ.

ಜಾತಿದ್ವೇಷ ಎಂಬುದು ವಿಷಸಮಾನ ಎಂದು ನಿಮಗೆ ಅರಿವಾಗಿರುವುದೇ ಒಂದು ಶುಭಸೂಚನೆ. ಗಾಂಧಿ ಟೋಪಿ ಧರಿಸಿರುವ ಅನೇಕರಿಗೆ ಇದು ಇನ್ನೂ ವೇದ್ಯವಾಗಿಲ್ಲ. ನಿಮ್ಮ ಉದ್ಧಾರಕ್ಕೆ ನೀವೇ ಪ್ರಥಮಸೋಪಾನವನ್ನು ದಾಟಿದೀರಿ. ಸಾಮಾನ್ಯವಾಗಿ, ಜಾತಿ ಕೋಮು ಮತ ಇತ್ಯಾದಿಗಳನ್ನವಲಂಬಿಸಿರುವ ದ್ವೇಷ ಕ್ಕೆಲ್ಲ " ಕೀಳುತನ" (Inferiority complex)ವೇ ಮೂಲಕಾರಣ. ಅದು " ಸವಾರಿ ಮನೋಭಾವ" (Persecution complex)ವಾಗಿ ಮಾರ್ಪಾ ಟಾಗುತ್ತದೆ. ಆದ್ದರಿಂದ, ನೀವು ಯಾವ ಯಾವುದರಲ್ಲಿ ಕೀಳು ಎಂಬುದನ್ನು ಕೂತು ಪಟ್ಟಿಮಾಡಿ. ನಿಮ್ಮ ಕಸಬಿನಲ್ಲಿ ಹೆಚ್ಚು ಪರಿಶ್ರಮ ಮಾಡಿ ; ಹೆಚ್ಚು ಶಿಕ್ಷಣ ಹೊಂದಿ ; ನಿಮ್ಮ ವಿಶ್ವಾಸ ಗೌರವಗಳನ್ನು ನೀವೇ ಪಡೆದುಕೊಳ್ಳಿ .. ಗಾಂಧಿ ಟೋಪಿಯ ಜೊತೆಗೆ ಗಾಂಧೀ ಸಾಹಿತ್ಯ ವ್ಯಾಸಂಗ ಅದರ ಮನನ ಇವುಗಳ ಕಡೆ ಗಮನ ಕೊಡಿ. ಗಾಂಧೀಗ್ರಾಮ, ಗಾಂಧೀರೋಡ್. ಮುಂತಾದ ಪವಿತ್ರ ಸ್ಥಳ ಗಳಿಗೆ ಕೂಡಲೇ ಮನೆ ಬದಲಾಯಿಸಿ. ಈಗ ನಿಮ್ಮನ್ನು ಆವರಿಸಿರುವ ವಿಷವಾಯು ಖಂಡಿತವಾಗಿಯೂ ಅಂಥ ಕಡೆಗಳಲ್ಲಿ ನಭೋಮಂಡಲಕ್ಕೆ ಏರುತ್ತೆ

೪. ನಾನೊಬ್ಬ ಬಡ ಗುಮಾಸ್ತೆ ; ನನ್ನ ಸಾಹೇಬರಿಗಿಂತ ನಾನೇ ಉಡಿಗೆ ತೊಡಿಗೆಗಳಲ್ಲಿ ಮಿರುಮಿರುಗುವೆನು ? ಇದು ಸರಿಯೆ ? ಇದರಿಂದ ಅವರಿಗೆ ನನ್ನ ಮೇಲೆ ಅಸೂಯೆ ಉತ್ಪನ್ನವಾಗುವುದಿಲ್ಲವೆ ?

ವೃಥಾ ನೀವು ಹೀಗೆ ತಳಮಳಗೊಳ್ಳಬೇಡಿ. ಬಡ ಗುಮಾಸ್ತೆಯರಿಗೆಲ್ಲ ಮಿರುಮಿರುಗುವ ಉಡಿಗೆತೊಡಿಗೆಗಳು ಈಗಿನ ಕಾಲದಲ್ಲಿ ಯಾರಿಂದ ಎಲ್ಲಿಂದ ಏತಕ್ಕೆ ಬರುತ್ತವೆ. ಎಂಬುದನ್ನು ಅವರು ಅರಿಯರೆ ?....ಅಲ್ಲದೆ, ನಿಮ್ಮ " ಷೋಕಿ " ಡ್ರೆಸ್ಸಿನಿಂದ, ಅವರ ಪ್ರತಿಷ್ಠೆ ಇನ್ನೂ 'ಹೆಚ್ಚಿದ ಹಾಗಾಯಿತಲ್ಲವೆ ? ಯೋಚಿಸಿ ಹರಕಲು ಬಟ್ಟೆಯ ತಾನು, ಇಂಥ ಅಪ್‌ಟುಡೇಟ್ ಅಣ್ಣಯ್ಯ (ಕೈಲಾಸಂ)ಗಳನ್ನು ಆಳುವಂತಾಯಿತಲ್ಲಾ, ಎಂದು ಅವರ ಮನ ಕುಣಿದಾಡುತ್ತದೆ. ಆದ್ದರಿಂದ, ನೀವು ಬೆಲೆ ಬಾಳುವ ಹೊಸ ಕಟ್ಟಿನ ಸೂಟುಗಳನ್ನು ಧರಿಸುವಷ್ಟು, ಅವರ ಅಂತ ರಂಗಕ್ಕೆ, ಆನಂದವೇ ವಿನಹ ಅಸೂಯೆ ಇರಲಾರದು. ಭಯಪಡಬೇಡಿ. ಇನ್ನೊಂದು ಸೂಟು ಹೊಲಿಸಿ ತರಿಸಿ.

೫. ನಾನೊಬ್ಬ ಪ್ರಖ್ಯಾತ ಭಾಷಣಕಾರ.........ಈಚೆಗೆ ನನ್ನ ಭಾಷಣಗಳಲ್ಲೆಲ್ಲ, " ಭಂಡವಾಳ ಶಾಹಿ " ಎಂಬ ಒಂದು ಪದ ಹೇಗೋ ಬಂದು ಸೇರಿಕೊಂಡು ಬಿಟ್ಟಿದೆ; ಗಂಟೆಗೆಂಭತ್ತು ಸಲ ಅದು ನನ್ನ ಕಂಠನಾಳದಿಂದ ಹೊರಬೀಳುತ್ತದೆ; ಅದರ ಅರ್ಥವೇನೋ ತಿಳಿಯದು ; ಅದರ ಸಾಮಂಜಸ್ಯತನವನ್ನೂ ನಾನು ತಿಳಿದವನಲ್ಲ........ಇದಕ್ಕೆ ಪರಿಹಾರವೇನು ?

ಅಯ್ಯೋ! ಅಯ್ಯೋ! ಇದಕ್ಕೆ ಪರಿಹಾರ ಹುಡುಕಿ, ಆ ಪದವನ್ನು ನಿಮ್ಮ ಭಾಷಣಗಳಿಂದ ತೊಡೆದು ಹಾಕಿದ ನಂತರ, ನಿಮ್ಮ ಕೀರ್ತಿಕಳಶ ಕಳಚಿ ಬಿದ್ದ ಹಾಗೆಯೇ! ಆ ಪದ ಪದೇಪದೇ ಕಿವಿಗೆ ಬೀಳದೆ ಇದ್ದರೆ, ಯಾವ ಭಾಷಣಕ್ಕೂ ಇಲ್ಲವೇ ಇಲ್ಲ! ಅದರ ಅರ್ಥ ಕಟ್ಟಿಕೊಂಡು ನಿಮಗೇನು ? ಹೊಡೆಯಿರಿ. " ಸಾಮಂಜಸ್ಯತನ " ಅಂತೀರಲ್ಲಾ! ಸೊಗಸಾದ ಮಾತು, ಅದು. ಅದನ್ನೂ ಪ್ರಯೋಗಿಸಿ....ನಿಮಗೆ ಸಮಸ್ತ ಸನ್ಮಂಗಳಗಳೂ ಲಭಿಸಲಿ....ಸಿರಿಗನ್ನಡಂಗೆಲ್ಗೆ.

೬. ನಾನು ವಿದ್ಯಾರ್ಥಿ ದೆಸೆಯವ ; ಇನ್ನೂ ದೆಸೆ ಕೂಡಿ ಬಂದಿಲ್ಲ " ಸಿನಿಮ ಸ್ಟಾರ್ " ಅಂದರೆ ಮನಸ್ಸು ಏನೋ ಒಂದು ತರಹ ಆಗುತ್ತೆ........ ದಯವಿಟ್ಟು ನನ್ನನ್ನ ಉಳಿಸಿ !

ಪ್ರಾಯಶಃ, ಸರಿ ಹೋಗುತ್ತೆ , ಚಿಂತಿಸಬೇಡಿ. ಪುರಂದರದಾಸರ " ಏನು ಸುಖಾ....ಇದು, ಏನು ಸುಖಾ " ಎಂಬ ಹಾಡನ್ನು ಅಭ್ಯಾಸಮಾಡಿ. ತಮಿಳು ಕನ್ನಡ ಚಿತ್ರಗಳಿಗೆ ಹೋಗಿ, ಪೂರ್ತ ನೋಡಿ ಬನ್ನಿ ಮಧ್ಯದಲ್ಲೆದ್ದು ಬರಬೇಡಿ, ಇತರರ ಹಾಗೆ.... ' ಏನೋ ಒಂದು ತರಹ ಆಗುತ್ತೆ ' ಅಂತೀರಲ್ಲ, ಆಗ, ಕುಳಿತು ಒಂದು ಸಣ್ಣ ಕತೆ ಬರೆದು........ಗೆ ಕಳುಹಿಸಿ.

—ಪುಸ್ಬಪ್ಪಣ್ಣ.

———o———

ಅಡಿಕೆ ಮೇಲಿನ ಸುಂಕ ಹೋಯಿತು. ಆದ್ದರಿಂದ, ಒಂದಿಷ್ಟು ವಿಳ್ಳೆದೆಲೆ ಸುಣ್ಣ ಸಿಕ್ಕರೆ, ಇನ್ನುಮೇಲೆ ಬಡ ಮೇಷ್ಟರುಗಳು ತಾಂಬೂಲ ಹಾಕಿಕೊಳ್ಳಬಹುದು.

* * *

" ಮಾರಾಟಕ್ಕಿದೆ. ಹದಿನೆಂಟು ಎಕ್ರೆಯಷ್ಟು ವಿಸ್ತಾರವಾದ ತೋಪಿನ ನಡುವೆ ಚಿಕ್ಕಬಂಗಲೆ....ನೀಲಗಿರಿ ನಗರವೊಂದರಲ್ಲಿ....ವಿಶ್ರಾಂತಿ ಜೀವನಕ್ಕೆ ಅನುಕೂಲ ...ರಾಜರುಗಳಿಗೆ ಇದೀಗ ಸುಸಮಯ "

" ಯೂನೋ " ಮುಂದೆ

ಸ್ವಾಮಿ ! ನಮ್ಮ ದೇಶ ಹಾದು ಹೊರಗಿನವರು ಯಾರೂ ಕಾಶ್ಮೀರಕ್ಕೆ ನುಗ್ಗುತ್ತಿಲ್ಲವೆಂಬುದನ್ನು ಒತ್ತಿ ಹೇಳುತ್ತೇವೆ !

ಅಥವಾ, ಹೊರಗಿಂದ ಪಠಾನ್ ಜನರು ತಂಡೋಪತಂಡವಾಗಿ ನಮ್ಮ ದೇಶ ಹಾದು ಕಾಶ್ಮೀರಕ್ಕೆ ನುಗ್ಗುತ್ತಿದ್ದರೂ, ನಾವು ಅವರಿಗೆ ಕೊಂಚವೂ ಸಹಾಯ ಮಾಡುತ್ತಿಲ್ಲವೆಂಬುದನ್ನು ತಾವು ಗಮನಿಸಬೇಕು !

ಅಥವಾ, ನಾವು ಅವರಿಗೆ ಏನಾದರೂ ಸಹಾಯಮಾಡುತ್ತಿದ್ದರೂ ಕೂಡ, ಅದರಿಂದ ಕಾಶ್ಮೀರಕ್ಕೆ ಇಂಡ್ಯನ್ ಸೈನ್ಯ ಬರುವಷ್ಟು ಪ್ರಮಾದವೇನೂ ಆಗಿಲ್ಲ !

ಒಂದುವೇಳೆ, ನಾವು ಅಂಥ ಪ್ರಮಾದ ಪರಿಸ್ಥಿತಿ ಒದಗಿಸಿದ್ದರೂ, ಅದು ಕಾಶ್ಮೀರದ ಜನರಿಗೆ ಆಗಬೇಕಾದದ್ದೇ ಎಂದು ನೀವು ಒಪ್ಪದಿರಲಾರಿರಿ ! ಈ ಅಂಶಗಳು ನಿಮಗೆ ವೇದ್ಯವಾದ ಮೇಲೆ, ನೀವು ಅಪ್ಪಣೆ ಕೊಡಿಸಬೇಕಾದದ್ದು ಇಷ್ಟೆ ! ನಮ್ಮನ್ನೂ ನಮ್ಮವರಾದ ಪಠಾನರನ್ನೂ ಮುಸ್ಲಿಂ ದೇಶವಾದ ಕಾಶ್ಮೀರಕ್ಕೆ ಇನ್ನೂ ನೂರ್ಮಡಿಯಾಗಿ ನುಗ್ಗಲು ಅವಕಾಶಕೊಟ್ಟು, ಇಂಡ್ಯನ್ ಸೈನ್ಯವನ್ನು ಅಲ್ಲಿಂದ ಹಿಂತೆಗೆಯಿಸಿ;............ಸುಮ್ಮನೆ ಯಾಕಿಷ್ಟು ಮಾತು ? ನಮಗೆ ತಾಳ್ಮೆ ಸಾಲದು ! ಕೊಡಿಸಿಬಿಡಿ, ಸ್ವಾಮಿ, ನಮಗೆ ಆ ಇಡೀ ದೇಶಾನ. ಅದಿಲ್ಲದೆ ಹೋದರೆ, ನಮ್ಮ ದೇಶಕ್ಕೇ ಬಲು ಕುಂದಕ. ದಮ್ಮಯ್ಯ ! ಕೊಡಿಸಿ ಬಿಡಿ ! ನೀವೇನು ಹೇಳಿದರೂ, ನಾವು ಮಾಡುವುದಕ್ಕೆ ಸಿದ್ಧ !

ಕೇಂದ್ರ ಸರ್ಕಾರದ ಮಂತ್ರಿಮಂಡಲವನ್ನು ವಿಸ್ತರಿಸಬೇಕೆಂಬ ಸೂಚನೆ ಬಂದಾಗ, ಜವಾಹರಲಾಲರು, " ಈಗ ಇರುವ ಸಂಖ್ಯೆ ಕೂಡ ನನ್ನ ಮನಸ್ಸಿಗೆ ಕೊಂಚ ಹೆಚ್ಚೆಂದೇ ತೋರುತ್ತಿದೆ " ಎಂದರು !........ಅವರ ಮಾತು ' ನಮಗೆ ' ಅರ್ಥವಾಗುತ್ತಿಲ್ಲ.

ಪಾತಾಳದಲ್ಲಿ ಪಾಪಯ್ಯ

(೬. ದಟ್ಟಿ ಪಂಚೆ ಸಿ. ಐ. ಡಿ.ಯೊಂದಿಗೆ ಪಾಪಯ್ಯನ ಭೇಟಿ.)

"ಎಸ್. ಎಸ್. ಸೇನಾನಾಯಕ" ಅನ್ನುವ ಹಡಗು ಆಗತಾನೇ ನಿಲ್ದಾಣವನ್ನು ಮುಟ್ಟಿತ್ತು. ಪ್ರಯಾಣಿಕರು ತಮ್ಮ ಹಾಸಿಗೆ, ಪೆಟ್ಟಿಗೆ, ಗಂಟು ಮೂಟೆಗಳನ್ನು ಸುಂಕದ ಖಾತೆಯವರ ಸೂಕ್ಷ್ಮದರ್ಶಕ ಪರೀಕ್ಷೆಯ ಸಲುವಾಗಿ ಪ್ರದರ್ಶಿಸಿ, ಪರೀಕ್ಷೆ ಮುಗಿದ ನಂತರ ಗೆದ್ದೆವೆಂದುಕೊಂಡು ಒಬ್ಬೊಬ್ಬರಾಗಿ ಹೊರಕ್ಕೆ ನಡೆಯುತ್ತಿದ್ದರು. ಸುಂಕದ ಅಧಿಕಾರಿಗಳು ಯಾರನ್ನೂ ನಾಲ್ಕೈದು ನಿಮಿಷಗಳಿಗೆ ಮೀರಿ ನಿಲ್ಲಿಸಿಕೊಳ್ಳಲಿಲ್ಲ. ಸೂಚಿಸತಕ್ಕ ಯಾವ ಪ್ರಸಂಗವೂ ನಡೆಯಲಿಲ್ಲ, ಒಂದರ್ಧ ಮುಕ್ಕಾಲು ಗಂಟೆಯವರೆಗೆ.

ಒಬ್ಬ ಉದ್ದನೆಯ ಮನುಷ್ಯನನ್ನ ಮಾತ್ರ ಖಾಕಿ ವೇಷಧಾರಿಗಳು ಸ್ವಲ್ಪ ವಿರಾಮವಾಗಿಯೇ ವಿಚಾರಿಸಿಕೊಂಡರು. ಅವನ ಪೆಟ್ಟಿಗೆ ಹಾಸಿಗೆಗಳ ಪರಿಶೋಧನೆ ಸಾವಧಾನವಾಗಿ ಜರುಗಿತು. ಕೋಟು, ಷರಾಯಿ, ಕಾಲುಚೀಲ, ಒಳ ಅಂಗಿ, ಟೋಪಿ, ಎಲ್ಲಾ ಶೋಧಿಸಲಾದವು. ಉದ್ದನೆಯ ಆಸಾಮಿ ಕಡೆಗೆ ತನ್ನ ಸಾಮಾನುಗಳನ್ನು ಕೂಲಿಯ ತಲೆಯಮೇಲೆ ಹೇರಿ ಹೊರಡಲನುವಾದಾಗ ಸುಂಕದವನೊಬ್ಬ ಕೊನೆಯವರೆಗೆ ಇರಲೆಂದು ಅವನ ಹೆಗಲಿಗೆ ತೂಗುಬಿಟ್ಟಿದ್ದ ಥರ್ಮಾಸ್ ಫ್ಲಾಸ್ಕಿನ ಮುಚ್ಚಳ ತೆಗೆದು ನೋಡಿದ. ಅದರ ತುಂಬ ಟೀ ಇತ್ತಲ್ಲದೆ ಕಲಕಿ ನೋಡಿದಾಗ ಬೇರೆ ಯಾವ ಘನ ವಸ್ತುವೂ ಇದ್ದಹಾಗಿರಲಿಲ್ಲ

ಸುಂಕದ ಅಧಿಕಾರಿಗಳು ಪೆಚ್ಚುಮೋರೆ ಹಾಕಿಕೊಂಡು ಉಳಿದ ಪ್ರಯಾಣೀಕರ ಕಡೆ ಗಮನ ತಿರುಗಿಸುವುದರೊಳಗೆ ಆ ಸೈಂಧವ ನಿಲ್ದಾಣದ ಹೊರ ಅಂಗಣವನ್ನು ಸೇರಿ ದಪ್ಪ ಗಂಟಲಿನಿಂದ "ಟಾಕ್ಸಿ"ಯನ್ನ ಕರೆಯುತ್ತಿದ್ದ.

ಅಷ್ಟರಲ್ಲಿ, ನಾನು ಭೇಟಿ ಮಾಡಲಿದ್ದ ದಟ್ಟಿಪಂಚೆ ಸಿ. ಐ. ಡಿ. ನನ್ನನ್ನೂ ಎಳೆದುಕೊಂಡು ಆಚೆಬಂದು, "ಟಾಕ್ಸಿ" ತರುತ್ತಿದ್ದ ಆ ಲಂಬಾಕೃತಿಯನ್ನು ಕೈ ಸನ್ನೆಯಿಂದ ನಿಲ್ಲಿಸಿ,

"ಒಂದೇ ಒಂದು ನಿಮಿಷ" ಅಂದ

ಸೈಂಧವ ನಿಂತಹಾಗೇ ನಿಂತು "ಏನು" ಅನ್ನುವ ಹಾಗೆ ಹುಬ್ಬು ಹಾರಿಸಿದ

ತಾನು ಯಾರೆನ್ನುವುದನ್ನು ಅವನಿಗೆ ಸೂಕ್ಷ್ಮವಾಗಿ ತಿಳಿಸಿ, ಸಿ. ಐ. ಡಿ. ಅವನ ಫ್ಲಾಸ್ಕನ್ನು ಕೈಗೆ ತೆಗೆದುಕೊಂಡ. ಅದರ ಭಾರ ನೋಡಿ, ಸೈಂಧವನ ಕಡೆ

ತಿರುಗಿ " ಸ್ವಲ್ಪ ಬನ್ನಿ ನನ್ನ ಹಿಂದೆ" ಅಂದದ್ದೆ ಅವನನ್ನ ವಿನಯಪೂರ್ವಕವಾಗಿ ಹಿಂದಕ್ಕೆ ಕರೆದುಕೊಂಡು ಹೋಗಿ ಖಾಕಿ ಗುಂಪಿನ ನಡುವೆ ಕೂರಿಸಿದ. ಕೆಮಿಸ್ಟ್ರಿ ತಿಳಿದ ಒಬ್ಬ ಅಧಿಕಾರಿ ಫ್ಲಾಸ್ಕಿನಲ್ಲಿದ್ದ ಟೀಯನ್ನು ಪರೀಕ್ಷೆ ಮಾಡಿ ಸಿ. ಐ. ಡಿ. ಊಹಿಸಿದ ಹಾಗೆ ಅದು ಚಿನ್ನದ ಕಣಗಳನ್ನು ಕರಗಿಸಿಕೊಂಡಿದ್ದ ಒಂದು ದ್ರವ ಅನ್ನುವುದನ್ನು ತಿಳಿಸಿದ. ಖಾಕಿ ಉಡುಪಿನವರೆಲ್ಲ ಒಮ್ಮೆಲೆಗೇ, "ಫ್ಲಾಸ್ಕಿನ ಭಾರ ನೋಡಿದ್ದರೆ ತಿಳೀತಿತ್ತು" ಎಂದು ಒಪ್ಪಿದರು.

ಗಲಾಟೆಯೆಲ್ಲ ತೀರಿದಮೇಲೆ, ಕಾಫಿ ಕುಡಿಯುತ್ತ ಸಿ. ಐ ಡಿ. ಯನ್ನು ಕೇಳಿದೆ.

" ಹ್ಯಾಗೆ ಆ ಟೀಯ ಮೇಲೆ ಗುಮಾನಿ ಮಾಡಿದಿರಿ ? "

ಒಂದು ಚಿಟಿಕೆ ನಶ್ಯ ಏರಿಸಿ ಆತ ವಿವರಿಸಿದ.

" ನೋಡಿ ಇದು ನಮಗೆ ಬಹಳ ಸಾಧಾರಣವಾದ ಕೇಸು, ಅನ್ನಬಹುದು. ಆಫ್ರಿಕಾದಿಂದ ಇಲ್ಲೀವರೆಗೆ ಪ್ರಯಾಣ ಮಾಡಿದವನು ಯಾವನಾದರೂ ತನ್ನ ಫ್ಲಾಸ್ಕನ್ನ ಭರ್ತಿಯಾಗೇ ಇಟ್ಟುಕೊಂಡು ಭೂಮಿಗೆ ಇಳಿತಾನೆಯೇ ಹೇಳಿ ! ಆಗಲೇ ನನಗೆ ಖಾತ್ರಿ. ಸುಂಕದ ಖಾತೆಯವರು ಇವನ ಚಹರೆಗಳನ್ನ ಮುಂಚೆಯೇ ಗುರುತಿಟ್ಟಿದ್ದರು. ಎಷ್ಟೋಸಲ ಬೇಸ್ತು ತಿನ್ನೋ ಹಾಗೆ ಈಸಲವೂ ತಿಂದರು ಆದರೆ ಇಂಥಾ ಸಂದರ್ಭಗಳಲ್ಲಿ ನಾವಿದ್ದೆ ಇರ್ತೀವಲ್ಲ ಉಸ್ತುವಾರೀಗೆ ! "

" ಅಂತೂ ದಿನಾ ಯಾರಾದರೂ ಇಂಥಾ ಖದೀಮರು ನಿಮ್ಮ ಕೈಗೆ ಸಿಕ್ಕಿ ಬೀಳ್ತಿರುತಾರೆ ಅನ್ನಿ. ಹಾಗಾದ್ರೆ ? " ಅನ್ನುತ್ತ ಪ್ರಾರಂಭಿಸಿದೆ ನನ್ನ ಪ್ರಶ್ನಾವಳಿಯನ್ನ.

" ಎಲ್ಲಾ ಕೇಸುಗಳೂ ನಮ್ಮತನಕ ಬರೋದಿಲ್ಲ. ಸಾಮಾನ್ಯರಾದ ಕೊರಮರಿಗೆಲ್ಲ ಸುಂಕದ ಅಧಿಕಾರಿಯೇ ಸಾಕು. ಅವರ ಪರೀಕ್ಷೆ ಏನು ಅಂಥಿಂಥದಲ್ಲ ! ನೋಡಿದಿರಲ್ಲ ನೀವೇ "

" ಹೌದು ನೋಡಿದೆನಲ್ಲ ! "

" ಈಗ, ಕಳ್ಳತನದಿಂದ ಮಾಲು ಸಾಗಿಸುವರನ್ನ ಎರಡು ರೂಪಾಗಿ ವಿಂಗಡಿಸಬಹುದು. ಒಂದು ಗುಂಪನ್ನ, ಅಮೆಚೂರ್ಸ್ ಅನ್ನಬಹುದು. ಇವರುಗಳನ್ನ ಈ ಖಾಕಿ ಬಟ್ಟೆಯವರೇ ಸುಲಭವಾಗಿ ಹಿಡಿದುಬಿಡುತ್ತಾರೆ ಒಂದು ಸಲ ಸಿಕ್ಕಿ ಬಿದ್ದರೆ ಮೂಗಿನವರೆಗೆ ದಂಡ ಕಕ್ಕಿ ಇವರುಗಳು ತಿರುಗಿ ಈ ಕೆಲಸಕ್ಕೆ ಕೈ ಇಡುವುದಿಲ್ಲ. ಇವರು ಏನಿದ್ದರೂ ಚಿನ್ನ ಬೆಳ್ಳಿ, ಒಡವೆ, ಬಟ್ಟೆ ಬರೆ ಇವುಗಳನ್ನು ರವಾನಿಸುವ ಯತ್ನ ಮಾಡುತ್ತಾರೆ - - - "

" ಬಟ್ಟೆ ಬರೆ ? " ಆಶ್ಚರ್ಯದಿಂದ ಕೇಳಿದೆ ನಾನು.

ದಟ್ಟಿಪಂಚೆ ಅಧಿಕಾರಿ ಇನ್ನೆರಡು ಕಾಫಿ ತರಿಸಿದ.

" ಬಟ್ಟೆ ಬರೆ ಅಂದರೆ, ರೇಷ್ಮೆ ಅಂತಿಟ್ಟುಕೊಳ್ಳಿ ಹೀಗೇ ಒಂದು ಸಲ, ರೇಷ್ಮೆ ಬೆಲೆ ಇಲ್ಲಿ ವಿಪರೀತವಾಗಿತ್ತು ತೆರಿಗೆ ಒಂದಕ್ಕೆ ನಾಲ್ಕಾಗಿದ್ದಾಗ. ಬರುತ್ತಿದ್ದ ಹಡುಗುಗಳಲ್ಲೆಲ್ಲಾ, ಏನಿಲ್ಲ ಅಂದರೂ ಒಂದೊಂದು ಹಡಗಿನಿಂದ ಒಂದು ಡಜನ್ನಿಗೆ ಕಮ್ಮಿ ಇಲ್ಲದೆ ಗರ್ಭಿಣಿ ಸ್ತ್ರೀಯರು ಸಾಲುಸಾಲಾಗಿ ಬಂದಿಳಿಯಲಾರಂಭಿಸಿದರು. ಕೂಡಲೇ ಒಬ್ಬ ಸ್ತ್ರೀ ಅಧಿಕಾರಿಯನ್ನ ನೇಮಿಸಬೇಕಾಯ್ತು.

ಒಬ್ಬೊಬ್ಬ ಗರ್ಭಿಣಿಯ ಹತ್ತಿರಲೂ ಕನಿಷ್ಟಪಕ್ಷ ಇಪ್ಪತ್ತು ಥಾನು ತೆಳ್ಳನೆಯ ಮೇಲ್ಮಟ್ಟದ ರೇಷ್ಮೆ ಬಟ್ಟೆಗಳ ವಸೂಲಾಯ್ತು ಗಜಕ್ಕೆ ಮೂವತ್ತು ರೂಪಾಯಿ ಯಷ್ಟಾದರೂ ಲಾಭ ಸಂಪಾದಿಸಬಹುದಾಗಿತ್ತು ಆ ಒಟ್ಟೆಯಿಂದ, ಆ ಕಾಲದಲ್ಲಿ.

" ಇನ್ನು ಎರಡನೇ ಗುಂಪಿನವರ ವಿಚಾರ. ಕಳ್ಳರವಾನೆಯನ್ನೇ ವೃತ್ತಿಯಾಗಿ ಅವಲಂಬಿಸಿರುವವರು. ಇವರುಗಳ ಮೇಲೆ ಗುಮಾನಿ ಮಾಡುವುದೇ ಕಷ್ಟ. ಇವರಲ್ಲಿ ಬಹಳ ಜನ ಸುಂಕದ ಕಟ್ಟೆಯನ್ನ ನಿಬಾಯಿಸಿ ಬಿಡುತ್ತಾರೆ. ಮತ್ತೆ ಸಿಗಬೇಕಾದರೆ ನಮ್ಮ ಕೈಗೇ. "

" ಬಹಳ ಚುರುಕು ಬುದ್ಧಿ ಬೇಕು ನಿಮ್ಮ ಕೆಲಸಕ್ಕೆ " ಅಂದೆ, ಇರಲಿ ಸ್ವಲ್ಪ ಹೊಗಳಿಕೆ ಅಂದುಕೊಂಡು.

" ಚುರುಕು ಬುದ್ಧಿಗಿಂತ—ಸೈಕಾಲಜಿ ಸ್ವಲ್ಪ ತಿಳಿದಿರಬೇಕು— ಹೇಳ್ತೀನಿ ಕೇಳಿ—ಹೀಗೇ ಒಂದು ಸಲ ಯಾವುದೋ ಹಡಗಿನಿಂದ ಇಳಿದ, ಒಬ್ಬ ಆಸಾಮಿ. ಏಡನ್ನಿನಿಂದ ಪ್ರಯಾಣ ಬೆಳೆಸಿದ್ದ. ಖಾಕಿ ಬಟ್ಟೆಯವರು ಯಥಾಪ್ರಕಾರ ಶೋಧನೆ ನಡೆಸಿ ಮನುಷ್ಯನನ್ನ ಒಳಹೊರಗು ಮಾಡಿ ನೋಡಿದರು. ಕಿವಿ ಮೂಗು ಗಳ ರಂಧ್ರಗಳೆಲ್ಲ ಭೂತಕನ್ನಡಿಯ ಮೂಲಕ ನೋಡಿದರು. ಏನೂ ಗಿಟ್ಟಲಿಲ್ಲ— ಮನುಷ್ಯನ ಆಕೃತಿ ಸ್ವಲ್ಪ ಸಂದೇಹಾಸ್ಪದವಾಗಿತ್ತು — ನಾನೇ ದಟ್ಟಿಪಂಚೆ ಡ್ಯೂಟಿ —ಗೇಟಿನ ಹತ್ತಿರ ತಗಲಿಕೊಂಡೆ - - ' ಕನ್ನಡಕ ತೆಗೀರಿ ' ಅಂದೆ - - ' ಕನ್ನಡಕ ' ಅಂದ ಅವನು - - ' ಹೌದು, ಕನ್ನಡಕ ' ಅಂದೆ. ಕನ್ನಡಕ ತೆಗೆದು! ಅವನ ಗಾಜಿನ ಕೃತಕ ಕಣ್ಣನ್ನ ತೆಗೆಸಿದೆ—ಅದರ ಹಿಂದೆ ಮೂರು ಲಕ್ಷ ರೂಪಾಯಿ ಬೆಲೆ ಬಾಳುವ ಪಚ್ಚೆ ! "

" ಅದು ಹ್ಯಾಗೆ ಊಹಿಸಿದಿರಿ ? "

" ಅದೃಷ್ಟ, ಲಕ್ಕು. ಎಲ್ಲೋ ಓದಿದ್ದೆ, ಈರೀತಿ ಕೂಡ ನಡೆಯುತ್ತೆ ಕಳ್ಳ ರವಾನೆ ಅಂತ. ಸರಿ ನೋಡಿದೆ ಒಂದು ಛಾನ್ಸು. ಒಂದು ಸಾವಿರ ರೂಪಾಯಿ ಇನಾಮು ಹೊಡೆದೆ ಆ ಕೇಸಿನಲ್ಲಿ."

" ಈ ವಜ್ರ ವೈಢೂರ್ಯಾದಿಗಳಲ್ಲದೆ ಬೇರೆ ಯಾವ ಸಾಮಾನುಗಳು ಹೆಚ್ಚಾಗಿ ಕಳ್ಳರವಾನೆಯಾಗುತ್ತಿರುತ್ತವೆ ? "

" ಇದಕ್ಕೆ ಇಂಥದ್ದೇ ಅಂತ ಏನೂ ಲೆಕ್ಕ ಇಲ್ಲ. ಆದರೆ, ರತ್ನಾಭರಣ ಗಳನ್ನ ಬಿಟ್ಟರೆ ಕೆಲವು ಮಾದಕ ಪದಾರ್ಥಗಳು ವಿಶೇಷವಾಗಿ ರವಾನೆಯಾಗುತ್ತವೆ."

" ಉದಾಹರಣೆಗೆ ? "

" ಅಫೀಮು— ಹೋದ ವರ್ಷದ ಮಾತು— ಒಬ್ಬ ಪ್ರಾಣಿಶಾಸ್ತ್ರದ ಪ್ರೊಫೆಸರು - - ನೋಡೋದಕ್ಕೆ ಗಡ್ಡ ಮೀಸೆ ನರೆತು, ಒಳ್ಳೆ ಬಟ್ಟೆಬರೆ ಧರಿಸಿ, ಸಾಧು ಪ್ರಾಣಿಯ ಹಾಗಿದ್ದರು - - ತಿಂಗಳು ತಿಂಗಳಿಗೂ ಸ್ಪೆಸಿಮೆನ್‌ಗಳ ಶೇಖರಣೆಗೆ ಅಂತ ರಂಗೂನಿಗೆ ಹೋಗಿ ಬರುತ್ತಿದ್ದರಂತೆ ಹಡಗಿನಲ್ಲಿ— ಯಾರೂ ಹೆಚ್ಚಾಗಿ ಅವರನ್ನ ವಿಚಾರಿಸುತ್ತಿರಲಿಲ್ಲ—ಒಂದು ಸಲ ನಾನು ಡ್ಯೂಟಿ, ಇದೇ ಜಾಗದಲ್ಲಿ - - ಅವರ ಸ್ಪೆಸಿಮೆನ್‌ಗಳನ್ನೆಲ್ಲಾ ಬಿಚ್ಚಿಸಿದೆ. ಅವರಿಂದಲೇ ಚಾಕು ಕೇಳಿ ತೆಗೆದುಕೊಂಡು ಆ ಕಪ್ಪೆ, ಹುಳ, ಹುಪ್ಪಟೆ, ಹಾವು ಚೇಳು. ಹಲ್ಲಿ, ಹಕ್ಕಿಗಳನ್ನೆಲ್ಲ ಒಂದೊಂದನ್ನಾಗಿ ಕತ್ತರಿಸಿದೆ, ಅವರು " ಹಾ. ಹೂ" ಅನ್ನುತ್ತಿದ್ದ ಹಾಗೇ - - - ಒಂದೊಂದು ಪ್ರಾಣಿಯ ಒಳಗೂ ನಾಲ್ಕು ನಾಲ್ಕು ತೊಲ ಅಫೀಮು ! "

" ಅಬ್ಬ ! " ಅಂದು ಅವನ ಕೆಲಸಕ್ಕೆ ನನ್ನ ಮೆಚ್ಚಿಗೆಯನ್ನ ಸೂಚಿಸಿ, ದಟ್ಟಿಪಂಚೆ ಸಿ. ಐ. ಡಿ.ಯಿಂದ ಅಪ್ಪಣೆ ಪಡೆದು ಬಸ್ಸು ಹತ್ತಿದೆ.

—ಪುಂಗನೂರು ಪಾಪಯ್ಯ.

— o —

" ಸರ್. ಸಿ. ಪಿ. ರಾಮಸ್ವಾಮಿ ಅಯ್ಯರವರು ಫೆಬ್ರವರಿ ೨೫ನೇ ತಾ॥ ನಯಾಗರಾ ಜಲಪಾತವನ್ನೂ, ಮಾರ್ಚಿ ೨೫ನೇ ತಾ॥ ಅಧ್ಯಕ್ಷ ಟ್ರೂಮನ್‌ರವರನ್ನೂ ಸಂದರ್ಶಿಸುತ್ತಾರೆ " (ಇಂಡ್ಯನ್ ಪತ್ರಿಕೆ) ... " ಅಧ್ಯಕ್ಷ ಟ್ರೂಮನ್‌ರವರು ಫೆಬ್ರವರಿ ೨೫ನೇ ತಾ॥ ಚಿಕಾಗೊ ಮೃಗಾಲಯವನ್ನೂ ಮಾರ್ಚಿ ೨೫ನೇ ತಾ॥ ಸರ್. ಸಿ. ಪಿ. ಯವರನ್ನೂ ಸಂದರ್ಶಿಸುತ್ತಾರೆ " (ಅಮೆರಿಕನ್ ಪತ್ರಿಕೆ)

* * *

" ಶೇಕಡ ಇಪ್ಪತ್ತೊಂದರಷ್ಟಿರುವ ಬ್ರಾಹ್ಮಣರದೇ ಈ ರಾಷ್ಟ್ರೀಯ ಚಳುವಳಿ " (ರಡ್ಡಿ) ...ಛೇ ಅಲ್ಲೂ, ಅವರೇ ಜವಾಬ್ದಾರಿ ಸರ್ಕಾರದ ಕಾರಣಕರ್ತರೆಂಬುದನ್ನು ನಾವೊಪ್ಪಲಾರೆವು.

ನಾ ಕಂಡ ಕೈಲಾಸಂ

—o—

ಕೈಲಾಸಂರವರ ‘ ತಾವರೆ ಕೆರೆ ’ಯನ್ನೋದಿದಾಗ, “ ಪರವಾಗಿಲ್ಲ ಕಣಯ್ಯ, ಯಾರೋ ಕೈಲಾಸಂ ” ಅಂದೆ. “ ಸುಮಾರಾಗಿ ಬರೆದಿದಾನೆ ಕತೆಗಳನ್ನ ” ಅಂದು ಕೊಂಡೆ. ಬಹಳ ದಿನಗಳಮೇಲೆ ಅವರ ‘ ಹುತ್ತದಲ್ಲಿ ಹುತ್ತ ’ವನ್ನೋದಿದಾಗ, ನನ್ನ ತಲೆಯಲ್ಲಿ ಮನೆಮಾಡಿದ್ದ ಸಾಹಿತಿಗಳನ್ನೆಲ್ಲಾ ಓಡಿಸಿ ‘ ಕೈ ’ಗೆ ಜಾಗ ಕೊಟ್ಟೆ, ‘ ಸೂಳೆ ’ಯನ್ನೋದಿದ ಮೇಲಂತೂ ಅವರನ್ನು ನನ್ನ ಸಾಹಿತ್ಯದೇವತಾಮೂರ್ತಿ ಯನ್ನಾಗಿ ಮಾಡಿ ನನ್ನ—ಹೃದಯದಲ್ಲಲ್ಲ ! ತಲೆಯಲ್ಲಿ ನಿಲ್ಲಿಸಿದೆ. ಅಂದಿನಿಂ ದಲೂ ಮರಿಸಾಹಿತಿಯಾದ ನನಗೆ ಹಿರಿಸಾಹಿತಿಯಾದ ‘ ಕೈ ’ರವರನ್ನು ಕಾಣ ಬೇಕೆಂಬ ಹಂಬಲ ಬಹಳವಾಗಿದ್ದಾಗ್ಯೂ ಅವರನ್ನು ಕಾಣುವ ಭಾಗ್ಯ ಬಹುದಿನಗಳ ವರೆಗೆ ನನಗೆ ದೊರೆಯಲಿಲ್ಲ. ಆದರೂ ಅವರ ಚಿತ್ರವೊಂದನ್ನು—ಅದೂ ಅವರ ಕೈಪಿಡಿಯಿಂದ ಕತ್ತರಿಸಿದ್ದು ಅನ್ನಿ—ನನ್ನ ಜೇಬಿನಲ್ಲೇ ಇಟ್ಟುಕೊಂಡು ತಿರುಗ ಲಾರಂಭಿಸಿದೆ ......ಅಂತೂ ಕಡೆಗೆ ನಾನು ಕೈಲಾಸಂರವರನ್ನು ಕಂಡೆ !

ನಾನು ಮೊದಲುಬಾರಿ ಕೈಲಾಸಂರನ್ನು ಕಂಡುದು ಬೆಂಗಳೂರಿನ ರೈಲ್ವೆ ಸ್ಟೇಷನ್ನಿನಲ್ಲಿ. ಒಂದು ಸಲ ಪ್ರಯಾಣದ ಮಧ್ಯೆ ನಾನು ಬೆಂಗಳೂರಿನಲ್ಲಿಳಿದಾಗ —ನಾನು ಬೆಂಗಳೂರು ನಿವಾಸಿಯಲ್ಲ—ಎದುರಿಗೆ ಒಂದು ವ್ಯಕ್ತಿ ನಿಂತಿದ್ದುದನ್ನು ಕಂಡೆ. ತಕ್ಷಣವೇ ನನ್ನ ಮನಸ್ಸಿಗೆ ಏನೋ ಹೊಳೆಯಿತು. ಜೇಬಿನಲ್ಲಿದ್ದ ಚಿತ್ರವನ್ನು ಹೊರತೆಗೆದು ಆ ವ್ಯಕ್ತಿಯೊಡನೆ ಹೋಲಿಸಿದೆ ಅದೇ ಮುಖ, ಅದೇ ನರೆಗೂದಲು ಕಣ್ಣಿನಲ್ಲಿ ಅದೇ ತೀಕ್ಷ್ಣದೃಷ್ಟಿ, ಸಿಗರೇಟು ಪಾನದಿಂದ ಕಪ್ಪಾದ ತುಟಿಗಳು, ಅದೇ ಹಾಸ್ಯದಿಂದ ರಂಗಾದ ಮುಖ, ಕತ್ತಿನಲ್ಲಿ ಧರಿಸಿದ್ದ ದಾರದ ತುದಿಯಲ್ಲಿ ನೇತಾಡುತ್ತಿದ್ದ ಏಕಾಕ್ಷ ಸುಲೋಚನ....ಎಲ್ಲಾ ಚಿತ್ರದಲ್ಲಿದ್ದಂತೆಯೇ ....ನನಗೆ ಅನುಮಾನವೇ ಆಗಲಿಲ್ಲ........ಇವರೇ ಕೈಲಾಸಂ ! ಕನ್ನಡ ಪ್ರಹಸನ ಪ್ರಪಿತಾಮಹರು ! !........ಬಹಳ ದಿನಗಳಿಂದಲೂ ಅವರನ್ನು ಕಾಣಬೇಕೆಂದಿದ್ದ ನನಗೆ ಅವರನ್ನು ಕಂಡಾಕ್ಷಣವೇ ಒಂದು ತರಹ ಮಾನಸಿಕ ಸುಸ್ತಾಯಿತು. ಈ ಮಹಾ ಸಾಹಿತಿಯನ್ನು ನನ್ನಂತಹ ಸಣ್ಣವ ಮಾತನಾಡಿಸುವುದಾದರೂ ಎಂತು !.... ಹೇಗೋ ಧೈರ್ಯ ತಂದುಕೊಂಡು ಹತ್ತಿರ ಹೋಗಿ “ಮಿಸ್ಟರ್ ಕೈಲಾಸಂ ?” ಎಂದೆ. ಆತನ ಕೈಲಿದ್ದ ಪುಸ್ತಕವನ್ನೇ ನೋಡುತ್ತ ಸಿಟ್ಟಾದವನಂತೆ, “ ಎನ್ನ ! ಕೈಲಾಸಮಾ, ಇಂಗೆ ಎಂಗೆ ಅಯ್ಯ, ಕಡಕ್ಕಂ ಕೈಲಾಸಂ, ಅಂಗೆ ಹಿಗ್ಗಿಬಾದಮ್ಸ್‌ಲೇ ಪೋಯಿ ಕೇಟುಪಾರ್ರು ” ಎಂದು ಆಕಡೆ ಕೈತೋರಿಸಿದ. ನನಗೆ ಹೇಗೋ ಆಯಿತು........

ಮೈಸೂರು ರೈಲಿನಲ್ಲಿ ನಾನು ಹತ್ತಿದ ಡಬ್ಬಿಗೇ ಆತನೂ ಹತ್ತಿದ. ಅದೂ ನನ್ನ ಎದುರು ಸೀಟಿನಲ್ಲೇ ಕುಳಿತ. ಆದರೂ ನನ್ನ ಗುರುತು ಆತನಿಗೆ ಹತ್ತಿದಂತೆ ಕಾಣಲಿಲ್ಲ. ರೈಲಿನಲ್ಲಿ ಮಾತಿನ ನಡುವೆ ಕೈಲಾಸಂರ ವಿಚಾರ ಬಂದಾಗ ಆತ ತಮಿಳು' ಬೆರಿಸಿದ ಕನ್ನಡದಲ್ಲೇ "ಕೈಲಾಸಂ ಕನ್ನಡ ಸಾಹಿತ್ಯಕ್ಕು ಎನ್ನಯ ಪಣ್ಣಿರಕ ? 'ಎಲ್ಲಾ ಇಂಗ್ಲಿಷಿನಿಂದಲೇ ಅಳಿದಿರಕ್ಕ' ಅಪ್ಪಡಿ ಅನ್ನಿ ಉಂಗಳ್ ಸಾಹಿತ್ಯಕ್ಕಾರಳೇ ನಂಬ ಊರಲ್ಲೇ ಶೊಲ್ಲಿದಿರಲ್ಲ!" ಎಂದ. ಆ ರೀತಿ ಕೈಲಾಸಂರ ಬಗ್ಗೆ ಹೊಟ್ಟೆಕಿಚ್ಚಿನಿಂದ ಹೇಳಿದ್ದ ಸಾಹಿತಿಗಳ ವಿಷಯ ನನಗೆ ಚನ್ನಾಗಿ ತಿಳಿದಿದ್ದುದರಿಂದ ಸುಮ್ಮನಾದೆ. ಆದರೂ ನನಗೆ ಕೈಲಾಸಂ ಬಗ್ಗೆ ತಿಳಿದಿದ್ದ ನಿಜವಾದ ವಿಷಯಗಳನ್ನು ಆ ತಮಿಳನ ತಲೆಯಲ್ಲಿ ತುಂಬಿ ಅವನನ್ನು ನಂಬಿಸಿದೆ.

ಮೇಲೆ ಬಿದ್ದ ಬೇಸ್ತಿನಿಂದ ಕೈಲಾಸಂರವರನ್ನು—ಅಷ್ಟು ಹೊತ್ತಿಗಾಗಲೇ ಅವರು ನಮಗೂ 'ಕೈ' ಆಗಿದ್ದರು...ಕಾಣಬೇಕೆಂಬ ಹಂಬಲ ಕಡಿಮೆಯಾಗಲಿಲ್ಲ. ಆದ್ದರಿಂದ ಅವರಿಗೆ ಈರೀತಿ ಕಾಗದ ಬರೆದೆ:—" ಕ. ಪ್ರ. ಪ್ರ ಪಿತಾಮಹ 'ಕೈ' ರವರೇ, ನಾನು ತಮ್ಮ ಪುಸ್ತಕಗಳಿಗಿಂತ ಹೆಚ್ಚಾಗಿ ಸಾತು ಪಾತು, ತಮ್ಮ, ಅಪ್ಪಣ್ಣ, ಆಹೋಬ್ಳ, ಜೀವುಗಳನ್ನೇ, ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುವ ಇಸಮುಗಳಲ್ಲೊಬ್ಬ. ಆದ್ದರಿಂದ ತಮ್ಮ ಐದಡಿ ದೇಹವನ್ನು ಒಂದು ಬಾರಿಯಾದರೂ ಕಾಣಬೇಕೆಂಬ ಅಭಿಲಾಷೆ ಮನಸ್ಸಿನಲಿ ಹುಟ್ಟಿ, ಕೊರೆಯುತ್ತಿದೆಯಾದ್ದರಿಂದ, ತಮ್ಮನ್ನು ಕಾಣಲು ಬೆಂಗಳೂರಿಗೆ ಬರೋಣವೆಂದಿದ್ದೇನೆ. ತಾವು ನನಗೆ ಎಲ್ಲಿ ಸಿಕ್ಕುತ್ತೀರ ಎಂಬುದನ್ನು ತಿಳಿಸಿದರೆ, ಬಹಳ ಕೃತಜ್ಞನಾಗಿರುತ್ತೇನೆ.

—ಇತಿ, ಮೂರ್ತಿ.

ವಿ. ಸೂ. ಜೊತೆಯಲ್ಲಿ ಜವಾಬಿಗಾಗಿ ಸ್ಟಾಂಪುಗಳನ್ನು ಕಳಿಸಿದ್ದೇನೆ—ಮೂರ್ತಿ" ಕಾಗದವನ್ನು ಮಡಿಸಿ ಕವರಿನಲ್ಲಿ ಹಾಕಿ ಅದರೊಡನೆ ಬರೆದ ಇತರ ಕಾಗದಗಳೊಡನೆ ಟಪಾಲಿಗೆ ಹಾಕಿದೆ.

ಮೂರು ದಿನಗಳಾದಮೇಲೆ 'ಕೈ'ಗೆ ನಾ ಬರೆದ ಕಾಗದ ಬೆಂಗಳೂರಿನಲ್ಲಿದ್ದ ನನ್ನ ಗೆಳೆಯ ರಾಮುವಿನಿಂದ ಹಿಂದಿರುಗಿ ಬಂತು. ನನ್ನ ಉತ್ಸಾಹದಲ್ಲಿ 'ಕೈ'ಗೆ ಬರೆದ ಆ ಕಾಗದವನ್ನು ರಾಮುವಿನ ವಿಳಾಸ ಬರೆದ ಕವರಿಗೂ, ರಾಮುವನ್ನ ಚನ್ನಾಗಿ ಬೈದು ಬರೆದ ಕಾಗದವನ್ನು 'ಕೈ'ನ ಕವರಿಗೂ ಹಾಕಿ ಕಳುಹಿಸಿದ್ದೆ ! 'ಕೈ'ಗೆ ಇದೂ ಒಂದು 'ಜೋಕ್" ಆಗಿ ಕಂಡಿರಬೇಕು.

ಒಂದು ವರ್ಷವಾದ ಮೇಲೆ ಬೆಂಗಳೂರಿಗೆ ಬಂದು 'ಸ್ವರ್ಗನಿವಾಸಿ' ಹೋಟಲಿನಲ್ಲಿ ಇಳಿದುಕೊಂಡಿದ್ದೆ. ಆಗ 'ಕೈ' ಮದ್ರಾಸಿನಲ್ಲಿ ನಡೆಯಲಿದ್ದ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಚುನಾಯಿತರಾಗಿದ್ದರೆಂದೂ, ಇನ್ನೆರಡು ದಿನಗಳಲ್ಲೇ ಸಮ್ಮೇಳನಕ್ಕೆ ಹೊರಡಲಿದ್ದಾರೆಂದೂ ತಿಳಿಯಿತು. ಅಂದು ಸಾಯಂ

ಕಾಲವೇ ಅವರನ್ನು ಕಾಣಬೇಕೆಂದು ಮನಸ್ಸುಮಾಡಿದೆ. ಅಂದು ಮಧ್ಯಾಹ್ನ ನಾಲ್ಕು ಗಂಟೆಯ ಹೊತ್ತಿಗೆ ಹೋಟಲಿನ ಮ್ಯಾನೇಜರ ಆಫೀಸಿಗೆ ಏತಕ್ಕೋ ಹೋದಾಗ ಆತ ಹೇಳಿದ, " ಸಾರ್, ಈಗತಾನೇ ನಿಮ್ಮ ಹೆಸರಿಗೆ ಒಂದು ಫೋನ್ ಕಾಲ್ ಬಂದಿತ್ತು. ನೀವಿಲ್ಲವೆಂದು ಹೇಳಿದೆ. ಪುನಃ ನಾಲ್ಕುವರೆಗೆ ಕರೆಯುತ್ತಾರಂತೆ " ನನಗೆ ಆಶ್ಚರ್ಯವಾಯಿತು

" ಎಲ್ಲಿಂದರೀ ಕಾಲ್ ಬಂದಿದ್ದು ? " ಎಂದು ಕೇಳಿದೆ. ಆತ ನನ್ನನ್ನು ಕರೆದ ಟೆಲಿಫೋನಿನ ನಂಬರನ್ನು ತಿಳಿಸಿದ. ಜೇಬಿನಿಂದ ಡೈರಿಯನ್ನು ತೆಗೆದು ನೋಡಿದೆ... ಬೆಳಿಗ್ಗೆ ರಾಮುವಿನ ಮನೆಗೆ ಹೋದಾಗ ಅವನು 'ಕೈ'ನ ವಿಳಾಸವನ್ನು ತಿಳಿಸುವುದರ ಜೊತೆಯಲ್ಲಿ ಅವರ ವಸತಿಯ ಟೆಲಿಫೋನ್ ನಂಬರನ್ನು ತಿಳಿಸಿದ್ದ. ಆದೂ ಇದೂ ಒಂದೇ ! ನನ್ನ ಎದೆ ನಾಲ್ಕಂಗುಲದಷ್ಟು ಉಬ್ಬಿತು. " ನಾನು ಕಾಣಬೇಕೆಂದು ಹಾತೊರೆಯುತ್ತಿದ್ದ 'ಕೈ'ಗೆ ನನ್ನ ಮನಸ್ಸಿನಲ್ಲಿದ್ದುದು ಹೇಗೆ ಗೊತ್ತಾಯಿತು ? ಅಂತೂ ಅವರೇ ನನ್ನನ್ನು ಕೂಗಿದ್ದಾರಲ್ಲ ! ನನ್ನ ಅದೃಷ್ಟವೇ ಅದೃಷ್ಟ ! ! " ಎಂದುಕೊಂಡು ಅಲ್ಲೇ ಕುಳಿತೆ.

ನಾಲ್ಕುವರೆಗೆ ಸರಿಯಾಗಿ ಟೆಲಿಫೋನ್ ಕರೆಯಿತು ರಿಸೀವರನ್ನು ಕಿವಿಗಿತ್ತಿಕೊಂಡೆ.

" ಹಲೋ, ಮೂರ್ತಿಯವರು, ತಾನೇ ? " ಆ ಕಡೆಯಿಂದ ಮಾತು ಕೇಳಿತು

" ಹೌದು, ಮಾತನಾಡುತ್ತಿರುವವರು 'ಕೈ' ತಾನೇ ? " ಎಂದೆ. " ಹ್ಞೂ " ಕೇಳಿಬಂತು. ಮೂರು ನಿಮಿಷ ಮಾತನಾಡಿದ ಮೇಲೆ ಅವರು ಅಂದು ಸಾಯಂಕಾಲ ಲಾಲ್‌ಬಾಗಿಗೆ ಬರುವುದಾಗಿಯೂ ಅಲ್ಲಿ ಗಾಜಿನ ಮನೆಯ ಬಳಿ ದೊಡ್ಡ ಸಂಪಿಗೆ ಮರದ ಬಳಿ ಕುಳಿತಿರುವುದಾಗಿಯೂ ಹೇಳಿದರು

ಸಾಯಂಕಾಲ ನನ್ನ 'ಕೈ' ಚಿತ್ರದೊಡನೆ ಅಲ್ಲಿಗೆ ಹೋದೆ. ಕೈ ಯಾವತ್ತೂ ಅಪಾಯಿಂಟ್‌ಮೆಂಟ್ ಕೊಟ್ಟು ಡಿಸಪಾಯಿಂಟ್ ಮಾಡುವುದಿಲ್ಲವೆಂದು ಕೆಲವು 'ಕೈ'-ಪೂಜಕರಿಂದ ಕೇಳಿದ್ದೆ. ಎಷ್ಟು ಹೊತ್ತಾದರೂ ಅವರು ಬರಲೇ ಇಲ್ಲ! ನನ್ನ 'ಕೈ' ಭಕ್ತಿ ನನ್ನನ್ನು ಹಿಡಿದು ನಿಲ್ಲಿಸಿತ್ತು. ಸ್ವಲ್ಪ ಕಾಲವಾದ ಮೇಲೆ " ಹಲೋ, ಮಿಸ್ಟರ್ ಮೂರ್ತಿ " ಎಂಬ ಧ್ವನಿ ಕೇಳಿಬಂತು. ತಿರುಗಿ ನೋಡಿದೆ. ನನ್ನ ಗೆಳೆಯ ರಾಮು ! " ಏನಯ್ಯ ! 'ಕೈ'ಯನ್ನು ನೋಡಾಯಿತೇ ? " ಎಂದ ನಗುತ್ತಾ. ಆಗ ಗೊತ್ತಾಯಿತು. ನಾನು 'ಕೈ'ನಲ್ಲಿಟ್ಟಿದ್ದ ಭಕ್ತಿಯನ್ನ ಹುಚ್ಚೆಂದು ತಿಳಿದು ನನ್ನನ್ನು ಹಾಸ್ಯಮಾಡುತ್ತಿದ್ದ ಗೆಳೆಯನೇ ಮಾಡಿದ್ದ ಕುಹಕವಿದೆಂದು ಅವನಿಗೆ ಚೆನ್ನಾಗಿ ಆಶೀರ್ವದಿಸಿ ಹೋಟಲಿಗೆ ಹೊರಟು ಬಂದೆ, ದುಃಖದಿಂದ

ಕೆಲದಿನಗಳ ಮೇಲೆ ಪತ್ರಿಕೆಗಳಲ್ಲಿ ಸಾಹಿತ್ಯ ಸಮ್ಮೇಳನದ ಸುದ್ದಿಯನ್ನೋದಿದ ಕೈಲಾಸಂರವರು, ಪರಿಷತ್ತಿಗಾಗಿ ಬರೆದುಕೊಟ್ಟುದನ್ನು ಓದದೆ, ಬಾಯಿಮಾತಿನಲ್ಲೇ " ಸಾಹಿತ್ಯ ಮನರಂಜನೆಗೇ " ಎಂದು ಮೇಜಿನಮೇಲಿನಿಂದ ಹೇಳಿದುದನ್ನು ಓದಿ ಸಂತಸಗೊಂಡೆ. ಪರಿಷತ್ತಿನ ಕೆಲವು ಹೇಳಿ ಬರೆಯಿಸುವವರಿಗೆ—ಇಂತಹವರನ್ನೇ ಇಂಗ್ಲೀಷಿನಲ್ಲಿ ಡಿಕ್ಟೇಟರ್ ಎನ್ನುವುದು—ತಮ್ಮ ಬೇಳೆಯು 'ಕೈ'ನ ಹತ್ತಿರ ಬೇಯದುದನ್ನು ಕಂಡು ಬಹಳ ಸಿಟ್ಟುಬಂತಂತೆ.

'ಕೈ' ಕೈಲಾಸವಾಸಿಯಾದಂದು ನಾನು ಬೆಂಗಳೂರಲ್ಲಿಯೇ ಇದ್ದೆ. ಅಂದು ಬೆಳಿಗ್ಗೆ ಗೆಳೆಯ ರಾಮುವೇ ನನಗೀ ದುಃಖವಾರ್ತೆಯನ್ನು ತಿಳಿಸಿದ. ತಕ್ಷಣ 'ಕೈ'ರ ವಸತಿಯೆಡೆ ಓಡಿದೆ, ದಾರಿಯಲ್ಲಿ ಅವರ ವಸತಿ, ಸ್ವಲ್ಪದೂರದಲ್ಲೇ ಬರುತ್ತಿತ್ತು. ಒಂದು ಮೌನ ಮಸಣಯಾತ್ರೆ. ಆ ಮೆರವಣಿಗೆ ಹತ್ತಿರ ಬಂದ ಕೂಡಲೇ ದುಃಖದ ಆವೇಶದಲ್ಲಿ " ಕರ್ಣಾಟಕ ಪ್ರಹಸನ ಪ್ರಪಿತಾಮಹ ಕೈಲಾಸಂಕೇ ಜೈ " ಎಂದವನೇ ಅಡ್ಡಬಿದ್ದೆ .. ..ಜೋರಾಗಿ ನಕ್ಕ ಶಬ್ದ ಕೇಳಿಸಿತು. " ಇದು ಕೈಲಾಸಂರವರದ್ದಲ್ಲೇ ?" ಎಂದು ನಗುತ್ತಾ ಕೂಗಿದರು ಸಂದರ್ಭವನ್ನರಿತುಕೊಂಡ ಕೆಲವರು.

ಮೇಲಕ್ಕೆದ್ದೆ. ದೂರದಲ್ಲಿ ಇನ್ನೊಂದು ಗುಂಪು ನನ್ನೆಡೆಗೇ ಬರುತ್ತಿತ್ತು. " ಕನ್ನಡಕ್ಕೊಬ್ಬನೇ ಕೈಲಾಸಂ " " ಕರ್ಣಾಟಕ ಪ್ರಹಸನ ಪ್ರಪಿತಾಮಹ ಕೈಲಾಸಂರೇ ಜೈ " " ಕೈಲಾಸಂ ಚಿರಾಯುವಾಗಲಿ ' ಆ ಕಡೆಯಿಂದ ಕೇಳಿಬಂತು ಈ ಶಬ್ದ ಸಮೂಹ........ಆ ಕಡೆಗೆ ಓಡಿದೆ.

ಅಂತೂ ಬಿಡಲಿಲ್ಲ. ಕೈಲಾಸಂರವರನ್ನು ಕಂಡೆ.

[ಜೇಮ್ಸ್ ಥರ್ಬರನ ಇಂಗ್ಲಿಷ್ ಲೇಖನವೊಂದರಂತೆಯೇ]

—ಹೆಚ್. ಎಸ್. ಮೂರ್ತಿ.

" ಭಿನ್ನವತ್ತಳೆ ಕೊಡುವುದನ್ನು ನಿಲ್ಲಿಸಿ ಎಂದು ಮಂತ್ರಿಗಳು ಪ್ರಾರ್ಥಿಸಿಕೊಂಡರು " (ಪತ್ರಿಕೆ)....ಭಿನ್ನವಾದದ್ದೆಲ್ಲ ಅಮಂಗಳವೆಂಬುದನ್ನು ನಾವೂ ಒಪ್ಪುತ್ತೇವೆ.

• • • •

ಇಲ್ಲಿಯ ಚಿತ್ರಮಂದಿರವೊಂದರಲ್ಲಿ ಬಡ ವಿದ್ಯಾರ್ಥಿಗಳಿಗಾಗಿ, ' ಶಾದಿ ' ಎಂಬ ಚಿತ್ರವನ್ನು ಪ್ರದರ್ಶಿಸಲಾಯಿತು........ಇದರಿಂದ ಅವರು ಮದುವೆಯ ಯೋಚನೆಯನ್ನು ತ್ಯಜಿಸುವರು, ತಾನೆ !

★ ಸಾರ್ವತ್ರಿಕ ರಜಾ ! ★

ನಮ್ಮೂರಿನಲ್ಲಿ ವ್ಯಾಜ್ಯಾಂಗ ಸಭೆ ಚುನಾವಣೆಗಳೇರ್ಪಟ್ಟಾಗ—ನಾನು ಗೆದ್ದೇ ಬಿಡಬೇಕು ಎಂದು ತರಾತುರಿ ಚುನಾವಣೆ ಪ್ರಚಾರಮಾಡಿದೆ. ಹೋಟಲಿನವರೆಲ್ಲಾ ಕುಮುಕ್ಕು ಕೊಟ್ಟರು, ಪಾನ್‌ಬೀಡಾದವರು ಬೆಂಬಲ ಕೊಡುತ್ತೇವೆಂದರು; ಟಾಕ್ಸಿಯವರೆಲ್ಲಾ ಬೆನ್ನು ತಟ್ಟಿದರು 'ದೇಹಿ! ನಿಮ್ಮ ವೋಟು' ಎಂದು ಹೋದಲ್ಲೆಲ್ಲಾ—'ಖಂಡಿತ' ಎನ್ನಿಸಿಕೊಂಡೇ ಬಂದೆ—

ಆದರೆ ಆ ಚುನಾವಣಾ ದಿನ ಸಾರ್ವತ್ರಿಕ ರಜಾ ಕೊಟ್ಟರು. '**ಖಂಡಿತ**' ಎಂದವರೆಲ್ಲಾ ಲಕ್ಷಣವಾಗಿ ಊಟಮಾಡಿ ಮನೆಯಲ್ಲಿ ಮಲಗಿದರೇ ವಿನಹಾ, ಕ್ಷೇತ್ರಕ್ಕೆ ಬಂದು, 'ತೊಗೋ' ಅನ್ನಲಿಲ್ಲ.

ಆದಕ್ಕೇ ಈಗ ತಕರಾರು ಅರ್ಜಿ ಹಾಕಿದ್ದೀನಿ '**ಚುನಾವಣೆ** ಇರೋದಿನ ರಜಾ ಕೊಡಬಾರದು. ಕಛೇರಿಗೆ ಹೋಗೋ ಗಲಾಟೇಲಿ ಓಟು ಮಾಡ್ತಾರೆಯೋ ವಿನಹಾ—ಬೇರೆ ಸಾಧ್ಯವೇ ಇಲ್ಲ' ಅಂತ—

—ಒಬ್ಬರ 'ಪತ್ರ'ದಿಂದ.



ಏನು ರಾಯರೇ—ಈ ಸಾರಿ ಯುಗಾದಿ ಹಬ್ಬ ಬಲು ಜೋರು ಅಂತ ಕಾಣುತ್ತೆ.

—ಯುಗಾದಿ ದಿನ ರಾಮನವಮಿ ನಡೆಸಿದೆವಪ್ಪಾ! ಸ್ಕೂಲು ಮೇಷ್ಟರಿಗೆ ಹಬ್ಬವೇಕೆ.

ಬಹಿಷ್ಕಾರದ ಬುಡ?

೪೨ರ ಮಹಾಕ್ರಾಂತಿ ವೇಳೆಗೆ ನಾನೊಂದು ಭಾರೀ ಗ್ರಂಥ ಬರೆದೆ. ನೀವೂ ನೋಡಿರಬಹುದು, ಓದಿರಬಹುದು ಅನ್ನುವಷ್ಟು ಧೈರ್ಯವಿಲ್ಲ ನನಗೆ ಅಸಾಧ್ಯ ಅವಸ್ಥೆಪಟ್ಟು ನನ್ನ ಹೆಸರು ಬದಲಾಯಿಸಿ, ಸಾರಿ, ಮರೆಮಾಚಿ ಬೇರೆ ಯಾವುದೋ ಗುಪ್ತನಾಮದಲ್ಲಿ ಪ್ರಕಟಿಸಿದೆ. ಆದರೂ ಕೊಂಚ ದಿವಸಗಳಲ್ಲೆ ಕೆಲವು ವಿಮರ್ಶಕ ಶುನಕರು ಅದರ ವಾಸನೆ ಹಿಡಿದು ನನ್ನನ್ನು ಪತ್ತೆಮಾಡಿ "ನೀವೇ ಅಲ್ಲವೇ ಇದನ್ನು ಬರೆದವರು?'' ಇತ್ಯಾದಿ ಗುಮಾನಿಯುತವಾಗಿ ಕೇಳಿದ್ದುಂಟು. ಕರ್ನಾಟಕದ ಮೂಲೆ ಮೂಲೆಗಳನ್ನು ಹುಡುಕಿ ನನ್ನ ಗ್ರಂಥದ ಪ್ರತಿಗಳನ್ನೆಲ್ಲಾ ವಶಪಡಿಸಿಕೊಂಡು ಸುಟ್ಟು ಭಸ್ಮಮಾಡಬೇಕೆಂಬ ಸರ್ಕಾರಿ ಆಜ್ಞೆಯಿದೆಯೆಂದು ಯಾವನೋ ಒಬ್ಬ ಕರ್ಕೋಟಕ ಪತ್ರಿಕಾಕರ್ತ ಪ್ರಕಟಿಸಿದಮೇಲೆ ಜನಸಾಮಾನ್ಯರಿಗೆ ನನ್ನ ಗ್ರಂಥ ಓದಲೇಬೇಕೆಂಬ ಹಂಬಲು, ಹುಚ್ಚು ಹಿಡಿದದ್ದು ಹಾಗೂ ನನ್ನ ಪ್ರಕಾಶಕ ಪ್ರಕಾಶಮಾನವಾದದ್ದು.

ಗ್ರಂಥದ ಹೆಸರೇನು ಗೊತ್ತೆ?.... ಏನಿರಬಹುದು? ಊಹಿಸಿ ನೋಡುವ? ಶಾಂತಿಯೋ, ಕ್ರಾಂತಿಯೋ?—ಅಲ್ಲ; "ಕೊಂಡೀಚೇಳು" ಥೆ, ಥೆ, ಅಲ್ಲ, "ಬ್ರಿಟಿಷರ ಭಂಡತನ?"—ಅಲ್ಲವೇ ಅಲ್ಲ. "ಸೋರೆ ಬುರುಡೆ" ಎಂಬ ಮಂತ್ರಿ ಜೀವಿತ ಚರಿತ್ರೆ?....ಸುಳ್ಳು! "ಮೈಸೂರು ರಾಮರಾಜ್ಯ?".... ಬುಡವಿಲ್ಲದ ಬುರುಡೆ; 'ಬಿಳಿ ನಾಯಿಯ ಬಾಲ'ವೆಂಬ ರಾಜಕೀಯ ನಾವೆಲ್ಲೀ.... ..ಶುದ್ಧ ಸುಳ್ಳು ... ... "ಕೊಡಲಿ" ಎಂಬ ಬಾಲ್ಷೆವಿಕ್ ಬರವಣಿಗೆಯೇ? ಖಂಡಿತಾ ಅಲ್ಲ ...ಮತ್ತೇನೂ ಅಂತೀರೋ?....ನಿಮಗೆ ಆಶ್ಚರ್ಯವಾಗಬಹುದು. ಅದು ಇನ್ಯಾವುದೂ ಅಲ್ಲ "ಎಳ್ಳುಂಡೆ'' ಎಂಬ ಸಾಮಾಜಿಕ ಕಾದಂಬರಿ. ಯಾರೋ ಹೇಳಿದರಂತೆ ಸರ್ಕಾರಕ್ಕೆ, (ಪುಣ್ಯಾತ್ಮ ಸಿಕ್ಕಿದರೆ ಐಸ್‌ಕ್ರೀಂ ಕೊಡಿಸುತ್ತೇನೆ)—ಇದು ಸರ್ಕಾರವನ್ನು ಖಂಡಿಸುವ ಬರವಣಿಗೆ ಎಂದು....ತಕೋ ಸರಕಾರ ಬಹಿಷ್ಕಾರ ಹಾಕಿತು ಅದಕ್ಕೆ.... ನನಗೂ ನನ್ನ ಪ್ರಕಾಶಕನಿಗೂ ಖುಲಾಯಿಸಿತು ಖಿಸ್ಮತ್... ಮಣ್ಣೂ ಇರಲಿಲ್ಲ

ಅದರಲ್ಲಿ .. ನನಗೇ ಆಶ್ಚರ್ಯ ! ಅಂತೂ ... ಕೊಂಚ ದುಡ್ಡು ಮಾಡಿಕೊಂಡೆ. ಬೇಕಾದರೆ ಮೆದ್ದು ನೋಡಿ ನನ್ನ ಎಳ್ಳುಂಡೆಯನ್ನು (ಈಗ ನಮ್ಮ ಸರ್ಕಾರ ತಾನೇ -ಅದಕ್ಕೇನೂ ಬಹಿಷ್ಕಾರವಿಲ್ಲ)....ಅದರಲ್ಲೆಲ್ಲಾ ಇದ್ದ ಮಹತ್ವ ಅಂದರೆ ಶಬ್ದಾಲಂಕಾರಗಳು....ಉಪಮಾನ ಉಪಮೇಯಗಳು........ಬಹಳ ತಿಣಿಕಿ ಜೋಡಿಸಿದುವು ಅನ್ನಿ........

೧. ಛೇ! ಆ ಚಿದಂಬರಯ್ಯನ ಮೇಲೆ ಛೇರ್‌ಮನ್ ಚನ್ನಮ್ಮನನ್ನು ಛೂ ಬಿಡೋಣವೇ ?

೨. ನಂತರ ರಾಯರು ಮಾಯವಾಗಿ ಬಾಯ್‌ಸ್ಕೂಲ್ ಹಿಂದಿನ ರಾಯಲ್ ಗಾಯಕ ಸಮಾಜದಲ್ಲಿ ಹಾಯವಾಗಿ, ಅಪಾಯಕ್ಕೆ ಸಿಕ್ಕಿ ಗಾಯವಾಗದೆ ಕಾಯ ಸಹಿತವಾಗಿ ಬಂದು ಕನ್ನಡಿಯಲ್ಲಿ ತಮ್ಮ ಛಾಯಾ ನೋಡಿಕೊಂಡು ಜಾಯಮಾನವನ್ನೆಲ್ಲಾ ಶೋಭಾಯಮಾನವಾಗಿ, ತಾಯೇ, ಚಾಮುಂಡೀ, ನೀನೇ ಕಾಯೇ ಮಹಾಬಾಯೇ....ಇತ್ಯಾದಿ

೩. ಮಂತ್ರಿವರ್ಯರ ಮೋಟಾರನ್ನು ಮೂದಲಿಸಿ ಮುನ್ನುಗ್ಗುವ ಮಂಕು ನಾಯಿಯಂತೆ

೪. ಡಿಪೋ ಅಕ್ಕಿಯಲ್ಲಿ ಸಿಕ್ಕುವ ಕಲ್ಲಿನಂತೆ, ನಮ್ಮ ದೇಶದಲ್ಲೇನು ! ಪದವೀ ಧರರಿಗೆ ಕೊರತೆ ?

೫. ಎಲಾ ರಾಮಚಂದ್ರ ನೀನೇ ನಮ್ಮನೆಯ ಮಿಣುಕು ಲಾಂದ್ರ !

೬. ನಿರಪರಾಧಿ ದಾರಿಹೋಕನನ್ನು ಕುಟುಕಲು ಕೊಂಡಿ ಎತ್ತಿದ ಚೇಳಿನಂತೆ ಅಮಿಲ್‌ದಾರರು ದೌತಿಯಿಂದ ಲೇಖಣಿ ಎತ್ತಿದರು.


೭. ಅಮ್ಮಾವ್ರ ಆಟಾಟೋಪವನ್ನು ಎದುರಿಸುವ ಕೆಚ್ಚೆದೆಯಿಂದ ನುಗ್ಗಿದ್ದರಿಂದ ಆ ಬಿರುಗಾಳಿ ಮಳೆಯಲ್ಲಿ ಬಚಾಯ್ಸಿಕೊಂಡು ಬಂದೆ....ಇಲ್ಲಧಿದ್ದರೆ ?

ಇತ್ಯಾದಿಯಾಗಿ ಅನೇಕ ಆಣಿಮುತ್ತುಗಳು ಅಸಾಧ್ಯವಾಗಿ ಆ ಅಮೂಲ್ಯ ಗ್ರಂಥವನ್ನು ಅಲಂಕರಿಸಿದ್ದುವು. ಮೂಲ ಮುದ್ರಣದ ಪ್ರತಿ ಒಂದೂ ನಮ್ಮಲ್ಲಿಲ್ಲದಿರುವುದರಿಂದ ಬಹಳ ಕೈಕಚ್ಚಿದಂತಾಗಿದೆ. ಈಚೆಗೆ ಪ್ರಕಟಿಸಿರುವ " ಎಳ್ಳುಂಡೆ "

ಸಾಕಷ್ಟು ಷಿಹಿಯಾಗಿದ್ದರೂ ಮೂಲಕೃತಿಯಂತೆ ಬೇಕಷ್ಟು ಚುರುಕಾಗಿಲ್ಲ. ಮೊದಲು ಅಚ್ಚಾದ್ದರಲ್ಲಿ ಒಂದು ಪ್ರತಿ ಮಾತ್ರ ಟಿಂಬಕ್ಟೂನಲ್ಲಿ ಉಳಿದಿದೆಯೆಂದು ಭಾರೀ ಗುಮಾನಿಯಿದೆ. ಮಿಕ್ಕದ್ದೆಲ್ಲಾ ಸುಟ್ಟು ಭಸ್ಮವಾಯಿತು. ಯಾರಾದರೂ ಅದನ್ನು ಪತ್ತೆಹಚ್ಚಿ ನಮಗೆ ತಲ್ಪಿಸಿದರೆ ತಮಗೆ ಪೆನ್ಸಿಲಿನ್ ಇಂಜೆಕ್ಷನ್ ಕೊಟ್ಟು ಪ್ರಾಣ ಬರಿಸಿದಂತಾಗುತ್ತೆ. ‘ಕನ್ನಡಿಗರ ಮುಂದೆ ನನ್ನ ಗ್ರಂಥದ ಪೂರ್ಣವನ್ನು ನಗ್ನ ರೂಪದಲ್ಲಿ ಇಡಬೇಕೆಂಬ ಹಂಬಲ ಹಾಗೇ ಇದೊ ನನ್ನ ಎಳ್ಳುಂಡೆ ಎಲ್ಲಿಯಾದರೂ ಸಿಕ್ಕರೆ ಕಲ್ಲಿನಲ್ಲಿ ಜಜ್ಜಿ ಮೆಲ್ಲದೆ ನನ್ನ ಕಡೆ ತಳ್ಳಿ....ಬೇಕಾದರೆ ದಳ್ಳಾಳಿ ಕೊಡುತ್ತೇನೆ … …ಅದು ಬಳ್ಳಾರಿಯಲ್ಲಿದ್ದರೂ ಸರಿ ಸುಳ್ಳಲ್ಲ ಅದು ಸಿಕ್ಕರೆ ನನ್ನ ಎದೆಯ ದಳ್ಳುರಿ ನೀರಿನಲ್ಲದ್ದಿದ ಕೊಳ್ಳಿಯಂತೆ ಶಮನವಾಗುತ್ತೆ.

(ಶ್ರೀಮಾನ್ ‘ಕೃ’ರವರ ಕೃಪೆಯಿಂದ ಬರೆದ ಕೃತಿ)

—ಟೀಯಸ್ಸಾರ್ರಾಜ್.



ತಾಳ ಮೇಳ ಕೂಡಿ ಬಂದರೆ

ತೋರೋ ಮೋರೆ ಹೀಗಿರಬೇಕೆ ?

ಈ ರಾಗ ಹಾಡು ಎಂದು ಅಪ್ಪಣೆಮಾಡಿದಾಗ ನಾಯಕ್ ಗೋಪಾಲನು ತನ್ನ ಮನೆಯವರನ್ನೆಲ್ಲಾ ಕಡೆಯಸಾರಿ ನೋಡಿ ಬಂದು, ತನ್ನ ಇಹಲೋಕದ ವ್ಯವಹಾರವನ್ನೆಲ್ಲಾ ಸ್ಥಗಿತಗೊಳಿಸಿ, ನಂತರ ಯಮುನಾ ನದಿಯಲ್ಲಿ ಕತ್ತಿನ ತನಕ ಮುಳುಗಿ ನಂತರ ದೀಪಕ್' ರಾಗ ಆಲಾಪಿಸಿದನಂತೆ. ಯಮುನೆಯು ಕುದಿಯಿತಂತೆ ; ಅವನ ದೇಹವು ನೀರಿನಲ್ಲೇ ಕುದಿಯಿತಂತೆ ; ಹಾಗೇ ಅವನು ಸುಟ್ಟು ಬೂದಿಯಾಗಿ ಯಮುನೆಯ ಬಿಸಿ ನೀರಿನಲ್ಲಿ ಐಕ್ಯವಾದನಂತೆ.

'ಗುಂಡಕ್ರಿಯಾ' ಹಾಡಿದರೆ ಕಲ್ಲೂ ಕರಗಿ ಹೋಗುವುದಂತೆ—ಒಮ್ಮೆ ತುಂಬುರ ನಾರದರಿಗೆ ಹಣಾಹುಣಿಯಾಯ್ತಂತೆ. ಆಗ ನಾರದರು ಸ್ವತಃ ವೀಣೆಯ ಮೇಲೆ 'ಗುಂಡ ಕ್ರಿಯಾ' ರಾಗವನ್ನು ಅದರಂತೆ ಆಗ ಅಲ್ಲಿ ಬಿದ್ದಿದ್ದ ಬಂಡೆಯೊಂದು ಕರಗಿ ಅಲ್ಲೇ ಕೊಳವಾಯ್ತಂತೆ. ಬ್ರಿಟಿಷರ ಮುಂದೆ ಇದೇ ರಾಗವನ್ನು ನಮ್ಮ ನಾಯಕರು ಹಾಡಿರಬೇಕು. ಇಲ್ಲದಿದ್ದರೆ ಅವರ ಹೃದಯ ಕರಗಿ, ನಮಗೆ ಸ್ವರಾಜ್ಯ ಸಿಗುತ್ತಿತೇ ಎನ್ನಿಸುತ್ತದೆ.

'ಮೇಘರಂಜನಿ' ಹಾಡಿದರೆ ಮಳೆಯಾಗುವುದು ನೀವೆಲ್ಲಾ ಬಲ್ಲಿರಿ. ಇದನ್ನು ಹಾಡಿಯೇ ನಮ್ಮ ಉತ್ತಮ ಅರ್ಧಾಂಗಿಯರು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿ ಕೊಳ್ಳುವರು.

'ಆಹಿರಿ' ಹಾಡಿದರೆ ಅಂದು ಅನ್ನ ಸಿಗುವುದಿಲ್ಲವಂತೆ. ಶಾಸ್ತ್ರಿಗಳೊಬ್ಬರಿಗೆ ಈ ವಿಷಯದಲ್ಲಿ ಸಂದೇಹಬಂದು, ಒಂದು ಬೆಳಿಗ್ಗೆ ಅವರು ಅನ್ನದ ಬುತ್ತಿ ಕಟ್ಟಿ ಕೊಂಡು ನಿರ್ಜನ ಪ್ರದೇಶಕ್ಕೆ ಹೋಗಿ ಬುತ್ತಿಯನ್ನು ಮರದ ಕೊಂಬೆಗೆ ನೇತು ಹಾಕಿ 'ಆಹಿರಿ' ಹಾಡಿದರಂತೆ. ಹಾಡಿದ ನಂತರ ತಲೆಯೆತ್ತಿ ನೋಡಿದರೆ ಬುತ್ತಿ ಮಂಗಮಾಯವಾಗಿತ್ತಂತೆ ಆ ಮಂಗ ಅದನ್ನೇ ತಿನ್ನುತ್ತಿತ್ತಂತೆ— ಇರಲಿ ನೋಡೋಣ ಎಂದು ಮುಂದಿನ ಊರಿಗೆ ಹೊರಟರಂತೆ. ಮಧ್ಯಾಹ್ನ ೧೨ ಘಂಟೆವೇಳೆಗೆ ಆ ಊರು ಸೇರಿದರಂತೆ. ಅಲ್ಲಿನ ಧರ್ಮಶಾಲೆಯಲ್ಲಿ ಎಲ್ಲರಿಗೂ ಅನ್ನ ಸಂತರ್ಪಣೆ ನಡೆಯುತ್ತಿತ್ತಂತೆ ಶಾಸ್ತ್ರಿಗಳೂ ಊಟಕ್ಕೆ ಕುಳಿತರಂತೆ. ಅನ್ನ, ಸಾರು, ಹುಳಿ ಎಲ್ಲಾ ಬಡಿಸಾಯಿತಂತೆ ಎಂದಿನಂತೆ ಆ ಊರ ರಾಣಿ ತುಪ್ಪ ಬಡಿಸುವುದಕ್ಕೆ ಬಂದಳಂತೆ. ಶಾಸ್ತ್ರಿಗಳ ಎಲೆಗೆ ತುಪ್ಪ ಬಿದ್ದಕೂಡಲೇ ಅವರಿಗೆ ಬಲು ಸಂತೋಷವಾಯ್ತಂತೆ - 'ಆಹಿರಿ' ಹಾಡಿದರೂ ಅನ್ನ ತಪ್ಪಲಿಲ್ಲವಲ್ಲಾ ಎಂದು ಕೂಡಲೇ ಮನ ಮರೆತು ಕೂಗಿದರಂತೆ. "ಆಹಿರಿ ! ನಿನ್ನ ಕೀರ್ತಿಯನ್ನು ನಾನು

ಭಂಗಮಾಡಿದೆನಲ್ಲ" ಎಂದು. ಕೂಡಲೇ ಹತ್ತಿರಿದ್ದವರು ಇವನನ್ನು ಹೊಡೆದು ಬಡಿದು ಬಿಸಿಲಿನಲ್ಲಿ ಬಂಡೆಗೆ ಕಟ್ಟಿ ಕೂಡಿಸಿದರಂತೆ. ಆ ಮೇಲೆ ಯಾರೋ ಹೇಳಿದರಂತೆ ಅವನಿಗೆ, ರಾಣಿಯ ಹೆಸರೂ 'ಆಹಿರಿ' ಎಂದು.

ಈ ರೀತಿಯಾಗಿ ನಮ್ಮ ಪೂರ್ವೀಕರು ರಾಗಲಕ್ಷಣಗಳನ್ನು ವಿಶದೀಕರಿಸಿದ್ದಾರೆ. ಆದರೆ ಒಂದು ರಾಗ ಮಾತ್ರ ಎಲ್ಲಾ ಗೃಹಸ್ಥರಿಗೂ ತಿಳಿದೇ ಇದೆ. ಯಾರೂ ಹೇಳಿ ಕೊಡಬೇಕಾಗಿಲ್ಲ. ಹಬ್ಬಕ್ಕೆ ಸೀರೆ ಕೊಂಡುಕೊಡದಿದ್ದರೆ ಅಡಿಗೆ ಮನೆಯಿಂದ 'ಮುಖಾರಿ' ಹೊರಬೀಳುತ್ತೆಂಬುದು.

—ಅನೂರಾಧ,

— ಕೊಟ್ಟಿಗೆ ಮಗು —

ಪುಟ್ಟರಾಮು ಸಣ್ಣ ಸೀತೆ
ಇಬ್ಬರೂನೂವೇ
ಕೊಟ್ಟಿಗೇಲಿ ಒಂದು ಮನೆಯ
ಮಾಡಿಕೊಂಡರು.
ವರುಷದೊಳಗೆ ಇವರ ಹಿತಕೆ
ಹುಟ್ಟಿತೊಂದ್ಮಗು
ಹುಟ್ಟಿದ್ಮಗು ಬಾಯಿ ತೆರೆದು
'ಅಂಬಾ' ಎಂದಿತು.
'ಅಮ್ಮ' ಅನ್ನಲಿಲ್ಲ 'ಅಪ್ಪ' ಅನ್ನಲಿಲ್ಲ
'ಅಂಬಾ' ಎಂದಿತು.
ಸಣ್ಣ ಸೀತೆ ಕಣ್ಣಿನಲ್ಲಿ
ನೀರು ತುಂಬಿತು
ಆಗ ರಾಮು ಗಲ್ಲ ಹಿಡಿದು
ಹೇಳುತಂದನು
ಕೊಟ್ಟಿ ಗೇಲಿ ಹುಟ್ಟಿದ್ಮಗು
ಅಂಬಾ ಅನ್ನದೇ
ಬೇರೆ ಹೇಗೆ ಅರಚಲಹುದು ?
ಅಷ್ಟೇ ಅಲ್ಲವೇ !



ಇದೇನೋ — ಆ ಬುಕಿಂಗ್ ಕ್ಲಾರ್ಕಿಗೆ — ಎರಡು ರೂಪಾಯಿ ಹಿಂಗ್ಯೆಲಿ ಕೊಟ್ಟೆ — ಅರೆ. ಅವನು ಕೊಟ್ಟಿರೋ ಸಾಮಾನು ನೋಡೋ — ಯಾರದೋ ? ಏನೋ ? ನೋಡೋಕ್ಕೆ ಇಷ್ಟು ದಫೂತಿ ಆಗಿದೆ.

• • •

ಕೊಚಿನ್ ಸಂಸ್ಥಾನದಲ್ಲಿ, ಆಹಾರ್ ಮತ್ತು ವಿದ್ಯಾಭ್ಯಾಸ, ಎರಡು ಇಲಾಖೆಗಳನ್ನೂ ಒಬ್ಬರೇ ಮಂತ್ರಿಗಳು ನಿರ್ವಹಿಸುತ್ತಿರುವುದು ಆಶ್ಚರ್ಯಕರ ! (ಸುದ್ದಿ) ....ಮೇಷ್ಟರುಗಳಿಗೆ ಲಭಿಸುವಷ್ಟು ಆಹಾರವನ್ನೇ ಅವರು ಎಲ್ಲರಿಗೂ ಒದಗಿಸುತ್ತಿದ್ದರೆ, ದೇಶದ ಗತಿ ಏನು ?